ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೧ ಜುಲೈ, ೨೦೦೧ ಸಂಚಿಕೆ ೧೨

ಭಾರತ್ ಪಾಕ್ ಮೈತ್ರಿಯ ಅರುಣೋದಯದ ನಿರೀಕ್ಷೆಯಲ್ಲಿ

★

ಸಿದ್ದವನಹಳ್ಳಿ ಕೃಷ್ಣಶರ್ಮ - ಒಂದು ಸ್ಮರಣೆ

★

ಚರಖಾ ಸಂಘದ ವಜ್ರಮಹೋತ್ಸವದ ಆಗಮನ!

★

ಶಿಕ್ಷಣದಲ್ಲಿ ಗುಣಾತ್ಮಕ ಸುಧಾರಣೆಗಾಗಿ ಸಲಹೆಗಳು

★

ಹೊಸ ಇತಿಹಾಸ ರಚನೆ ಕುರಿತು

★

ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೧   ಸಂಚಿಕೆ : ೧೨

ಜುಲೈ   ೨೦೦೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :

ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :

ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.
ದೂರವಾಣಿ : ೦೮೨೩೬/೫೮೭೫೪

ಹಸಿವಿನ ಮೇಲೆ ಕವಿತೆ
ಬರೆಯಲು ಕೂತೆ
ಹಸಿವೇ ಎದುರು ಬಂದು
ನಿಂತಂತಾಯಿತು.
ಇಡೀ ಜೀವಿಗಳಿಗೆ ನಾನೇ ಧಣಿ
ದಂಗೆ ಎಬ್ಬಿಸುವೆ ನಾನು
ಯುದ್ಧಗಳ ಮಾಡಿಸುವೆ
ಬಂದೂಕಿನ ಬಾಯಿಗೆ ಮಕ್ಕಳನ್ನು ಕಟ್ಟಿ
ಎಲ್ಲೆಂದರಲ್ಲಿ ಅವುಗಳನ್ನು ಹೂಳಿಬಿಡುವೆ
ಹೀಗೆನ್ನುತ್ತ ಅಲ್ಲಿಂದ ಸರಿದ
ಹಸಿವು ಸಾವಕಾಶ ಸಾವಕಾಶವಾಗಿ
ನನ್ನೊಳಗೆ ತೂರಿಕೊಳ್ಳಲಾರಂಭಿಸಿತು.
ಅಸಾಧ್ಯ ಹಸಿವಾಗಿ
ಕವಿತೆ ಬರೆವುದ ಬಿಟ್ಟು
ರೊಟ್ಟಿ ಹುಡುಕಲು ಆರಂಭಿಸಿದೆ.

–ಸರಜೂ ಕಾಟ್ಕರ್

ಚಂದಾದಾರರಲ್ಲಿ :–
ಚಂದಾ ಕಳುಹಿಸಿರುವ ಓದುಗರಿಗೆ
ಕೃತಜ್ಞತೆಗಳು.
– ಪ್ರಕಾಶಕರು

ವಿಚಾರ ದೀಪ್ತಿ........

ಪ್ರಕೃತಿಯು ಕೋಟ್ಯಾಂತರ ವರ್ಷಗಳಿಂದ ಮಾನವನ ಜೀವವವನ್ನು ರೂಪಿಸುತ್ತ ಬಂದಿದೆ. ನಮಗಿರುವ ಜೀರ್ಣಕೋಶದಂಥ - ದಕ್ಷವಾದರೂ ಅತ್ಯಂತ ಸರಳವಾದ - ಯಂತ್ರವನ್ನು ಯಾವ ವಿಜ್ಞಾನಿಯೂ ರಚಿಸಲಾರ. ಹೃದಯದಂಥ ಸ್ವಯಂ ಚಾಲಕ, ಸ್ವಯಂ ಶಾಸಕ ಯಂತ್ರವನ್ನು ಯಾವ ಯಂತ್ರ ಶಾಸ್ತ್ರಜ್ಞನೂ ನಿರ್ಮಿಸಲಾರ. ವಿತಂತಿಯೋ, ತಂತಿಯೋ ಯಾವ ಮಾರ್ಕೋನಿಯೂ ನಮ್ಮ ನರಗಳ ಸಮೂಹದಂಥ ವಾರ್ತಾವಾಹಿನಿಯನ್ನು ರೂಪಿಸಲಾರ. ಮಾನವನ ದೇಹ ಮತ್ತು ಮನಸ್ಸುಗಳ ಸಹಜ ಕ್ರಿಯಾ ವಿಧಾನವನ್ನು ಅಜ್ಞಾನಿ ಮನುಷ್ಯ ಹೊಸದಾಗಿ ರಚಿಸಲೂ ಆರ, ಬದಲಿಸಲೂ ಆರ. ಆದುದರಿಂದ ತನ್ನ ಮನಸ್ಸಿಗೆ ತೋಚಿದ ಜೀವನದ ದಿಕ್ಕನ್ನು ಬದಲಿಸಲು ಮಾಡಿದ ಮನುಷ್ಯ ಪ್ರಯತ್ನವೆಲ್ಲವೂ ವ್ಯರ್ಥ. ನಾವು ಮಾಡಬೇಕಾದುದೆಲ್ಲ ಪ್ರಕೃತಿಯೊಡನೆ ಸಹಕರಿಸುವುದು, ಅತ್ಯುತ್ತಮ ರೀತಿಯಲ್ಲಿ ಪ್ರಕೃತಿ ತನ್ನ ಕೆಲಸ ನಡೆಸಲು ತಕ್ಕ ಪರಿಸ್ಥಿತಿಯನ್ನು ಕಲ್ಪಿಸಿಕೊಡುವುದು. ಪ್ರಕೃತಿಗೆ ಏನು ನೆರವು ಬೇಕೋ ಅದನ್ನು ಒದಗಿಸುವುದು ಮನುಷ್ಯನ ಕೆಲಸ. ಪ್ರಕೃತಿಯ ವಿಧಾನಕ್ಕೆ ತಪ್ಪಿ ನಡೆದರೆ ಸಾಮಾಜಿಕ ಅವ್ಯವಸ್ಥೆಯೇ ಫಲ.

ಮನುಷ್ಯ ಒಬ್ಬ ಕಲೆಗಾರ. ಅವನ ಮೌಲ್ಯಗಳೇ ಅವನ ಬಣ್ಣ. ಅವನ ಇಚ್ಛಾ ಬಲವೇ ಅವನ ಕುಂಚ. ಬಾಳು ಅವನ ಕೈಯಲ್ಲಿರುವ ಪಟ. ಅದರ ಮೇಲೆ ಆ ಕುಂಚದಿಂದ ಅವನು ಹೇಗೆ ಗೆರೆ ಎಳೆದರೆ ಹಾಗೆ ಚಿತ್ರ ಮೂಡುತ್ತದೆ. ಲೋಕದ ಪ್ರಗತಿಗೆ ಅದು ಸಾಧಕವಾಗಬಹುದು, ಬಾಧಕವಾಗಲೂಬಹುದು. ಸ್ವಾರ್ಥಮಯ ಮೌಲ್ಯಗಳು ನೀರು ಬಣ್ಣವಿದ್ದ ಹಾಗೆ. ದಿನಕಳೆದ ಹಾಗೆ ಆ ಬಣ್ಣ ಅಳಿಸುತ್ತದೆ. ನಿಸ್ವಾರ್ಥ ಮೌಲ್ಯಗಳು ಅಜಂತಾದಲ್ಲಿ ಶತಮಾನ ಹಲವಾದರೂ ಅಚ್ಚಳಿಯದಿರುವ ಮೃದ್ವರ್ಣಗಳಂತೆ.

– ಡಾ॥ ಜೆ. ಸಿ. ಕುಮಾರಪ್ಪ

ಭಾರತ-ಪಾಕ್ ಮೈತ್ರಿಯ
ಅರುಣೋದಯದ ನಿರೀಕ್ಷೆಯಲ್ಲಿ........

– ಸುರೇಂದ್ರ ಕೌಲಗಿ

ಇದೇ ಜುಲೈ ೧೪ ರಂದು ಭಾರತ – ಪಾಕಿಸ್ತಾನ ಸಂಬಂಧದ ಕ್ಷಿತಿಜದ ಮೇಲೆ ಮೈತ್ರಿಯ ಅರುಣೋದಯ ಆದೀತೆ ಎಂಬ ನಿರೀಕ್ಷೆಯಲ್ಲಿ ಇಡೀ ವಿಶ್ವವೇ ಕಾತುರತೆಯಿಂದ ಕಾದಿದೆ.

ತೀವ್ರತಮವಾದ, ತುಂಬ ಸೂಕ್ಷ್ಮ ಸಂವೇದನೆಯ ರಾಜಕೀಯ ಭಿನ್ನಾಭಿಪ್ರಾಯದ ಗೋಂಡಾರಣ್ಯದ ನಡುವೆಯೂ ಎರಡೂ ದೇಶಗಳ ನಾಯಕರು : ಪ್ರಧಾನಿ ವಾಜಪೇಯಿ ಮತ್ತು ರಾಷ್ಟ್ರಪತಿ ಮುಷರಫ್ : ಮಾತುಕತೆಗಾಗಿ ಆಗ್ರಾದಲ್ಲಿ ಭೇಟಿಯಾಗಲು ನಿಶ್ಚಯಿಸಿದ್ದಾರೆ. ಇವರ ಈ ಭೇಟಿ ಕಾರ್ಮೋಡದ ಅಂಚಿನಲ್ಲಿಯ ಮಿಂಚಿನಂತೆ ಬಂದಿದೆ. ಈ ಮಹತ್ವದ ಸಕಾರಾತ್ಮಕ ರಾಜಕೀಯ ಬೆಳವಣಿಗೆಯನ್ನು ವಿಶ್ವದ ಪ್ರತಿಯೊಬ್ಬ ಶಾಂತಿಪ್ರಿಯನೂ ತನ್ನ ಸಹೃದಯತೆಯ ನೀರನ್ನೆರದು ಸ್ವಾಗತಿಸಬೇಕಿದೆ, ಪೋಷಿಸಬೇಕಿದೆ.

ಏಕೆಂದರೆ ಭಾರತ – ಪಾಕ್ ಮಾತುಕತೆ ಅತ್ಯಂತ ಕಠಿಣವಾದುದಾಗಿದೆ. ಎರಡೂ ದೇಶಗಳ ನಾಯಕರು ತೆರೆದ ಮನಸ್ಸಿನಿಂದ, ಯಾವುದೇ ಪೂರ್ವಗ್ರಹ ಪೀಡಿತರಾಗದೆ, ಯಾವುದೇ ಖಚಿತ ವಿಷಯಪಟ್ಟಿಯಿಲ್ಲದೆ ಮಾತುಕತೆ ಪ್ರಾರಂಭಿಸುವುದಾಗಿ ಹೇಳಿದ್ದರೂ ಸಹ ಈ ಎರಡೂ ನಾಯಕರು ತಮ್ಮ ತಮ್ಮ ದೇಶಗಳಲ್ಲಿಯ ರಾಜಕೀಯ ಪರಿಸ್ಥಿತಿಗಳ ಬಂಧಿಯಾಗಿದ್ದಾರೆ. ಪಾಕ್ ಆಕ್ರಮಿತ ಪ್ರದೇಶವೂ ಸೇರಿ ಇಡೀ ಕಾಶ್ಮೀರ ರಾಜ್ಯ ಭಾರತದ ಅವಿಭಾಜ್ಯ ಅಂಗವೆಂಬುದು ಭಾರತದ ನಿಲುವಾಗಿದೆ. ಈ ಕುರಿತು ಆರು ವರುಷಗಳ ಹಿಂದೆಯಷ್ಟೆ ೧೯೯೪ರಲ್ಲಿ ಲೋಕಸಭೆ ಸರ್ವಾನುಮತದ ತೀರ್ಮಾನ ಕೈಗೊಂಡಿದೆ. ಈ ತೀರ್ಮಾನ ವಾಜಪೇಯಿಯವರ ಸಂಧಾನದ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿದೆ. ಅಂತೆಯೇ ಪಾಕಿಸ್ತಾನದ ಮುಷರಫರದು ಕೂಡ. ಅಲ್ಲದೆ, ಪಾಕಿಸ್ತಾನದ ಪಾದರಸದಂಥ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಮುಷರಫರು ಮಾಡಿಕೊಳ್ಳುವ ಯಾವುದೇ ಒಪ್ಪಂದವನ್ನು ಮುಂದಿನ ಸರ್ಕಾರಗಳು ಮಾನ್ಯ ಮಾಡುತ್ತವೆಂಬ ಬಗ್ಗೆ ಯಾವ ಭರವಸೆಯೂ ಇಲ್ಲ. ಈ ಇಬ್ಬರೂ ನಾಯಕರು ತಮ್ಮ ಜುಲೈ ೧೪ರ ಭೇಟಿಯ ಮುನ್ನ ತಮ್ಮ ತಮ್ಮ ಮನಸ್ಸಿನಲ್ಲಿರುವುದನ್ನು ಹೇಳುತ್ತಲೇ ಬಂದಿದ್ದಾರೆ. ವಾಜಪೇಯಿ ಮುಂಬೈಯ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಲ್ಲಿ ಗಾಲಿಖುರ್ಚಿಯ ಮೇಲೆ ಕುಳಿತೇ "ಕಾಶ್ಮೀರ

ಭಾರತದ ಅಂಗವಾಗಿರುವುದನ್ನು ಯಾರೂ ಪ್ರಶ್ನಿಸುವಂತಿಲ್ಲ" ಎಂಬ ಹೇಳಿಕೆ ಕೊಟ್ಟಿದ್ದಾರೆ. ಅದೇ ರೀತಿ ಮುಷರಫ್ ಸಹ ಕಟ್ಟುನಿಟ್ಟಾದ ಹೇಳಿಕೆ ಕೊಡುವುದರ ಜೊತೆಗೆ ಪಾಕ್ ತನ್ನ ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ರಕ್ಷಣಾ ಹಕ್ಕನ್ನು ಬಿಟ್ಟುಕೊಡುವುದಿಲ್ಲವಾಗಿ ಹೇಳಿದ್ದಾರೆ. ಈ ಮಧ್ಯ ಶಿವಪೂಜೆಯಲ್ಲಿ ಕರಡಿಗಳು ಬಂದಂತೆ ಎರಡೂ ದೇಶಗಳಲ್ಲಿಯ ಧರ್ಮಾಂಧ ಸಂಘಟನೆಗಳು ಬಂದು ಕುಣಿಯುತ್ತಿವೆ. ಅವು ತಲೆಗೊಂದು ಹೇಳಿಕೆ ಕೊಡುತ್ತಿವೆ. ಅವು ಮೂರನೇ ಶಕ್ತಿಯಾಗಿ ಪ್ರಭಾವ ಬೀರುತ್ತಿವೆ.

ಅಲ್ಲದೆ, ಈ ಮೊದಲು ೧೯೪೮,-೧೯೬೧, ೧೯೭೫, ೨೦೦೦ ಈ ವರ್ಷಗಳಲ್ಲಿ ಭಾರತ-ಪಾಕ್ ಮಧ್ಯ ಅಘೋಷಿತ ಯುದ್ಧಗಳಾಗಿವೆ. ಅವುಗಳ ಪರಿಣಾಮವಾಗಿ ಕಾಶ್ಮೀರ ಮಹಾರಾಜರು ಭಾರತದೊಂದಿಗೆ ಮಾಡಿಕೊಂಡಿದ್ದ ಆ ರಾಜ್ಯದ ಸೇರ್ಪಡೆಯ ಒಪ್ಪಂದ, ಶಿಮ್ಲಾ ಒಪ್ಪಂದ, ೧೯೫೭ರ ವಿಶ್ವರಾಷ್ಟ್ರ ಸಂಸ್ಥೆಯ ಭದ್ರತಾ ಸಮಿತಿಯ ಠರಾವು, ಲಾಹೋರ ಘೋಷಣೆ ಮುಂತಾದವುಗಳೆಲ್ಲ ಸುಳ್ಳಾಗಿ ಹೋದವು. ಆದ್ದರಿಂದ ಈಗ ಪ್ರಸ್ತುತದಲ್ಲಿ ನಡೆಯಲಿರುವ ಉಭಯ ದೇಶಗಳ ನಾಯಕರ ಆಗ್ರಾ ಮಾತುಕತೆಯ ಹಣೆಬರಹವು ಕೂಡ ಅದೇ ರೀತಿ ಎಂದು ಭಾವಿಸುವವರು ಎರಡೂ ದೇಶಗಳಲ್ಲಿ ಬಹಳಷ್ಟು ಜನರಿದ್ದಾರೆ.

ಭಾರತ - ಪಾಕಿಸ್ಥಾನದ ಮಧ್ಯ ಇರುವ ನೂರಾರು ಸಮಸ್ಯೆಗಳಲ್ಲಿ ಪ್ರಮುಖವಾದವು : ಕಾಶ್ಮೀರ್, ಗಡಿ ಗುರುತಿಸುವಿಕೆ, ಗಡಿಗಳಲ್ಲಿಯ ಘರ್ಷಣೆ, ಪಾಕಿಸ್ಥಾನ ಚೀಣಾಕ್ಕೆ ಕಾಶ್ಮೀರದ ಸುಮಾರು ೫ ಸಾವಿರ ಚದುರ ಕೀಲೋಮೀಟರ್ ಕೊಟ್ಟಿರುವ ಪ್ರದೇಶದ ಸ್ಥಾನಮಾನ, ಭಾರತದಲ್ಲಿರುವ ಧರ್ಮಾಂಧ ಭಯೋತ್ಪಾದಕರಿಗೆ ಪಾಕಿಸ್ತಾನದ ಕುಮ್ಮಕ್ಕು, ಇರಾಣದಿಂದ ಭಾರತದವರೆಗೆ ಹಾಕಬೇಕೆಂದಿರುವ ಅನಿಲ ಪೈಪ ಲೈನ್, ಅಂತರ್ ದೇಶ ಸಾರಿಗೆ ವ್ಯವಸ್ಥೆ, ವಾಣಿಜ್ಯ ವ್ಯವಹಾರ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆ ಇತ್ಯಾದಿ. ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವುದು ಕಾಶ್ಮೀರ ಸಮಸ್ಯೆ. ಅದು ಪರಿಹಾರಗೊಂಡರೆ ಉಳಿದೆಲ್ಲ ಸಮಸ್ಯೆಗಳೂ ಸರಾಗವಾಗಿ ಬಗೆಹರಿಯುವವು.

ಆದರೆ, ಕಾಶ್ಮೀರ ಸಮಸ್ಯೆಗೆ ಪರಿಹಾರ ಸುಲಭವಾಗಿಲ್ಲ. ಎರಡೂ ದೇಶಗಳು ಕೊಟ್ಟು-ಕೊಳ್ಳುವ ತಂತ್ರವನ್ನು ಉಪಯೋಗಿಸಿದರೆ ಮತ್ತೆ ಎರಡೂ ಕಡೆಗೂ ಗಲಭೆಗಳಾಗುವ ಭೀತಿ ಇದ್ದೇ ಇದೆ. ಕೊಟ್ಟುಕೊಳ್ಳುವ ತಂತ್ರಗಳಲ್ಲಿ ಪ್ರಧಾನವಾದುವು:–

ಕಡೆಯ ರಕ್ಷಾ ಪುಟ ನೋಡಿ

ಸಿದ್ದವನಹಳ್ಳಿ ಕೃಷ್ಣಶರ್ಮ – ಒಂದು ಸ್ಮರಣೆ

– ಎಸ್. ಆರ್. ರಾಮಸ್ವಾಮಿ

(ಸಿದ್ದವನಹಳ್ಳಿ ಕೃಷ್ಣಶರ್ಮರು ಕನ್ನಡ ಭಾಷೆಯ ಹೊಸ ಶಕ್ತಿಯಾಗಿದ್ದರು. ಅವರನ್ನು ಪರಂಪರಾಗತ ರೀತಿಯಲ್ಲಿ ಸಾಹಿತಿ ಎಂದು ಕನ್ನಡ ಸಾಹಿತ್ಯ ಕ್ಷೇತ್ರ ಗುರುತಿಸದಿದ್ದರೂ ಅವರು ಮಾತ್ರ ಕನ್ನಡ ಬರಹಕ್ಕೆ ಒಂದು ಮೊನಚು, ಒಂದು ವೇಗ, ಒಂದು ಶಕ್ತಿ ತಂದು ಕೊಟ್ಟರು. ಗಾಂಧೀ ವಿಚಾರವನ್ನು ಕನ್ನಡದ ಮೂಲಕ ಕನ್ನಡಿಗರಿಗೆ ಪರಿಚಯಮಾಡಿ ಕೊಟ್ಟರು. ಕಡಿಮೆ ಎತ್ತರದ ಆದರೆ ಬಹು ಸಾಮರ್ಥ್ಯದ ಅಂಥ ವ್ಯಕ್ತಿಯ ಮರಣೋತ್ತರ ಸ್ಮರಣೆ ಇಲ್ಲಿದೆ. - ಸಂ)

ಇಂಗ್ಲೀಷ್ ದಿನಾಂಕದ ಲೆಕ್ಕದಲ್ಲಿ ಇದೇ ಜುಲೈ ೪ ಸಿದ್ದವನಹಳ್ಳಿ ಕೃಷ್ಣಶರ್ಮರ ೯೮ನೇ ಜನ್ಮದಿನ. ಜನ್ಮಶತಾಬ್ದಿ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಅವರ ಪ್ರೇರಣಾದಾಯಿ ವ್ಯಕ್ತಿತ್ವ ಸ್ಮರಣಾರ್ಹವೆನಿಸುತ್ತಿದೆ. "ಕೃಷ್ಣಶರ್ಮ ಪಾದರಸದಂತೆ" ಎನ್ನುತ್ತಿದ್ದರು, ಗುರುಪಂಕ್ತಿಯವರಾದ ರಾಳ್ಳಪಲ್ಲಿ ಅನಂತಕೃಷ್ಣಶರ್ಮ. ಆ ಪಾದರಸವನ್ನು ಗಟ್ಟಿಯಾಗಿ ಹಿಡಿದು ನಿಲ್ಲಿಸಿ ಕೆಲಸ ಮಾಡಿಸಲು ಮಹಾತ್ಮಾ ಗಾಂಧಿಯವರಂಥ ಸರ್ವಂಕರ್ಷ ಮೂರ್ತಿಯೇ ಬೇಕಾಯಿತು. ಕೃಷ್ಣಶರ್ಮರ ಪ್ರಸ್ತಾಪ ಬಂದಾಗ "ಅವನೊಬ್ಬ ರಾಕ್ಷಸ" ಎಂದು ಉದ್ಗರಿಸುತ್ತಿದ್ದರು ವಿ. ಸೀತಾರಾಮಯ್ಯ. ಹೀಗೆ ತಮ್ಮ ಸಮಕಾಲೀನ ಧೀಮಂತರಿಂದಲೇ ಪ್ರಶಂಸೆಗೊಳಗಾಗಿದ್ದವರು ಸಿದ್ದವನಹಳ್ಳಿ ಕೃಷ್ಣಶರ್ಮ (೪.೭.೧೯೦೪ - ೧೪.೧೦.೧೯೭೩). ಸಾಮಾಜಿಕ ಕಾರ್ಯಕರ್ತರ ಪಾಲಿಗಂತೂ ಅವರೊಬ್ಬ ಅದ್ಭುತ ವ್ಯಕ್ತಿಯೇ ಆಗಿದ್ದರು.

ಕನ್ನಡಕ್ಕೆ ಕೃಷ್ಣಶರ್ಮರಷ್ಟು ಪ್ರಮಾಣದ ಗಾಂಧೀ ಸಾಹಿತ್ಯ, ಸರ್ವೋದಯ ಸಾಹಿತ್ಯವನ್ನಿತ್ತವರು ಬಹುಶಃ ಬೇರೆಯಿಲ್ಲ. ಕೆಲವರು ಪರಿಸರದಿಂದಲೋ, ಸಾಂದರ್ಭಿಕ ಪ್ರೇರಣೆಯಿಂದಲೋ ಸಾರ್ವಜನಿಕ ಕಾರ್ಯಕ್ಕೆ ಇಳಿಯುತ್ತಾರೆ. ಆದರೆ ಸಿದ್ಧವನಹಳ್ಳಿ ಕೃಷ್ಣಶರ್ಮರು ಸಾರ್ವಜನಿಕ ಕಾರ್ಯಕ್ಕಾಗಿಯೇ ಹುಟ್ಟಿ ಬಂದವರೆಂದು ಅನಿಸುತ್ತಿತ್ತು. ಸಿದ್ಧವನಹಳ್ಳಿ ಇರುವುದು ಚಿತ್ರದುರ್ಗದ ಬಳಿ. ಚಿತ್ರದುರ್ಗ ಬಿಟ್ಟು ಕಾಲೇಜು ವ್ಯಾಸಂಗಕ್ಕೋಸ್ಕರ ಮೈಸೂರಿಗೆ ಬಂದರು ಕೃಷ್ಣಶರ್ಮ. ಆಗ ಎಲ್ಲ ಕಡೆ ಸತ್ಯಾಗ್ರಹ ಚಳವಳಿಗಳು ಆರಂಭವಾಗಿದ್ದವು. ಅಲ್ಪ ಕಾಲದಲ್ಲಿ ಕೃಷ್ಣಶರ್ಮರು ತಮ್ಮ ಜೀವಿತ ಕಾರ್ಯ ಏನೆಂಬುದನ್ನು ಕಂಡುಕೊಂಡರು. ಖಾದಿದೀಕ್ಷೆ ತೊಟ್ಟರು. 'ಯಂಗ್ ಇಂಡಿಯಾ' ಮೂಲಕ ಪ್ರಸಾರಗೊಳ್ಳುತ್ತಿದ್ದ ಗಾಂಧಿಯವರ ಸಂದೇಶಕ್ಕೆ ಮಾರುಹೋದರು. ಮೈಸೂರಿನಲ್ಲಿ

ಎಂ. ವೆಂಕಟಕೃಷ್ಣಯ್ಯನವರು, ರಾಳ್ಳಪಲ್ಲಿ ಅನಂತಕೃಷ್ಣಶರ್ಮರು ಮೊದಲಾದವರನ್ನು ಸಮೀಪದಿಂದ ಕಾಣುವ ಅವಕಾಶ ದೊರೆತದ್ದರಿಂದ ಕೃಷ್ಣಶರ್ಮರಲ್ಲಿ ಸುಪ್ತವಾಗಿದ್ದ ಧ್ಯೇಯವಾದ ಪ್ರಜ್ವಲಗೊಂಡಿತು. ಹೈಸ್ಕೂಲು ದಿನಗಳಿಂದಲೇ ಬರವಣಿಗೆಯಲ್ಲಿಯೂ ಆಸಕ್ತರಾಗಿದ್ದ ಶರ್ಮರ ಆರಂಭದ ಬರಹಗಳು ಧಾರವಾಡದ 'ಜಯ ಕರ್ಣಾಟಕ' ಪತ್ರಿಕೆಯಲ್ಲಿ ಪ್ರಕಟವಾಗತೊಡಗಿದವು. ಹಾಗೇ ದ.ರಾ.ಬೇಂದ್ರೆ, ವಿ. ಕೃ. ಗೋಕಾಕ ಮೊದಲಾದವರ ನಿಕಟ ಸಹವಾಸವೂ ದೊರೆಯಿತು. ಅದೇ ದಿನಗಳಲ್ಲಿ ಪಂಡಿತ ತಾರಾನಾಥರ ಭೇಟಿಯೂ ಆಯಿತು. ತಾರಾನಾಥರದು ಎಂಥವರನ್ನೂ ಆಕರ್ಷಿಸುವ ಬಹುಮುಖ ವ್ಯಕ್ತಿತ್ವ. ತರುಣರಿಗಂತೂ ಅವರ ಸಹವಾಸವೆಂದರೆ ಉತ್ಸವ. ಕೃಷ್ಣಶರ್ಮರು ರಾಯಚೂರಿಗೆ ಹೋಗಿ ತಾರಾನಾಥರ ಆಶ್ರಮದಲ್ಲಿ ಒಂದಷ್ಟು ಸಮಯ ಇದ್ದರು (೧೯೨೦-೨೧). ಹೈದರಾಬಾದಿನ ಉನ್ನತ ಸರ್ಕಾರೀ ಅಧಿಕಾರಿ ರಂಗಾಚಾರ್ಯರ ಪುತ್ರಿಯೊಡನೆ ಶರ್ಮರ ವಿವಾಹವಾದ ಮೇಲೆ ಶರ್ಮರು ಹೈದರಾಬಾದಿಗೆ ವಲಸೆಹೋದರು. ಶಾಲೆಯೊಂದರಲ್ಲಿ ಕನ್ನಡ ಶಿಕ್ಷಕರಾದರು. ಆದರೆ ಒಂದಷ್ಟು ಸಮಯದ ನಂತರ ರಾಷ್ಟ್ರೀಯ ಚಟುವಟಿಕೆಯೇ ಪ್ರಧಾನವಾಯಿತು.

ಹೈದರಾಬಾದ್ ಸಂಸ್ಥಾನದಲ್ಲಿಯೂ ಕಾಂಗ್ರೆಸ್ ಚಟುವಟಿಕೆಗಳನ್ನು ಉಪಕ್ರಮಿಸಲು ೧೯೩೦ರಲ್ಲಿ ಕಾಂಗ್ರೆಸ್‌ನ ಅನುಮತಿ ಪಡೆಯಲು ಹೋದ ತಂಡದಲ್ಲಿ ಶರ್ಮರೂ ಇದ್ದರು. ಹೀಗೆ ಗಾಂಧಿಯವರ ದಟ್ಟಪ್ರಭಾವ ಅವರ ಮೇಲಾಗತೊಡಗಿತು. ಏತನ್ಮಧ್ಯೆ ಜನಸಂಘಟನೆ, ಬರವಣಿಗೆ ಎರಡೂ ಬಿರುಸುಗೊಂಡಿತು; ನಿಜಾಂ ಸರ್ಕಾರ ಕೃಷ್ಣಶರ್ಮರನ್ನು ಹೈದರಾಬಾದಿನಿಂದ ಗಡೀಪಾರುಮಾಡಿತು. ಹೈದರಾಬಾದಿನಲ್ಲಿ ಹಲವಾರು ಸಂಘಟನೆಗಳನ್ನು ನಿರ್ಮಿಸಿ ಆ ಭಾಗದಲ್ಲಿ ಕನ್ನಡಪರ ಚಟುವಟಿಕೆಗಳಿಗೆ ಅಸ್ತಿಭಾರ ಹಾಕಿದರು, ಕೃಷ್ಣಶರ್ಮ.

ಅದಾದ ಮೇಲೆ ಹೊಸಪೇಟೆ, ಮುಂಬಯಿ, ಕೆಲಕಾಲ ಚಿತ್ರದುರ್ಗ ಮುಂತಾದ ಕಡೆ ಇದ್ದರು, ಮುಂಬಯಿಯಲ್ಲಿ ಜವಾಹರಲಾಲ್ ನೆಹರು, ಪಟ್ಟಾಭಿ ಸೀತಾರಾಮಯ್ಯ, ಬಲವಂತರಾಯ್ ಮೆಹತಾ ಮೊದಲಾದವರ ಜೊತೆ ಕೆಲಸ ಮಾಡಿದರು. ೧೯೪೦ರ ದಶಕದ ಆರಂಭದಿಂದ ಅಂತಿಮವಾಗಿ ಬೆಂಗಳೂರಿಗೆ ಬಂದು ನೆಲೆಯೂರಿದರು. ತಿ. ತಾ. ಶರ್ಮರ ಹೆಗಲ ಭಾರವನ್ನು ಕಡಿಮೆ ಮಾಡುವ ಉದ್ದೇಶವೇ ಅವರಲ್ಲಿ ಪ್ರಧಾನವಾಗಿತ್ತೆಂದೆನಿಸುತ್ತದೆ. ತಿ.ತಾ. ಶರ್ಮರ 'ವಿಶ್ವಕರ್ಣಾಟಕ' ಪತ್ರಿಕೆಯ ಹೊಣೆಯನ್ನು ಕೃಷ್ಣಶರ್ಮರು ವಹಿಸಿಕೊಂಡಾಗ - ಹಿರಿಯರಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ವರ್ಣಿಸುತ್ತಿದ್ದಂತೆ - ಗಾಳಿಯೂ ಬೆಂಕಿಯೂ ಒಂದೇ ಕಡೆ ಸೇರಿಕೊಂಡಂತಾಯಿತು.

ನನ್ನದು ವಾರಪತ್ರಿಕೆ ಅಲ್ಲ "War ಪತ್ರಿಕೆ"- ಎಂದು ಸ್ವಯಂ ತಿ. ತಾ. ಶರ್ಮರೇ ಹೇಳುತ್ತಿದ್ದರು. ಕೃಷ್ಣಶರ್ಮರ ಬರಹದ ಪ್ರಖರತೆ ಎಷ್ಟು ವಿಶ್ರುತ ವಾಗಿತ್ತೆಂದರೆ, ೧೯೪೨ರ 'ಕ್ವಿಟ್ ಇಂಡಿಯಾ' ಘೋಷಣೆಯ ಹಿನ್ನೆಲೆಯಲ್ಲಿ ಅವರು ಬರೆದ 'ಇನ್ನು ಸಾಕು' ಬರಹವನ್ನು ಸರ್ಕಾರ ಅದು ಮುದ್ರಿತವಾಗು ವುದಕ್ಕೆ ಮುಂಚೆಯೇ ನಿಷೇಧಿಸಿ ಶರ್ಮರಿಗೆ ಬಂಧನ ವಿಧಿಸಿತು! ಆ ದಿನಗಳಲ್ಲಿ ಎಂದರೆ ೧೯೪೦ರ ದಶಕದಲ್ಲಿ – ಪತ್ರಿಕೋದ್ಯಮದಲ್ಲಿ ಆಸಕ್ತರಾದ ಅಸಂಖ್ಯ ಮಂದಿ ತಯಾರಾದದ್ದು ತಿ. ತಾ. ಶರ್ಮ ಮತ್ತು ಕೃಷ್ಣಶರ್ಮರ ಪ್ರಭಾವಲ ಯದಲ್ಲಿಯೇ. ಎನ್. ಎಸ್. ಸೀತಾರಾಮಶಾಸ್ತ್ರಿ, ಖಾದ್ರಿ ಶಾಮಣ್ಣ, ನಾಡಿಗ ಕೃಷ್ಣಮೂರ್ತಿ, 'ಕಿಡಿ' ಶೇಷಪ್ಪ, ಎಸ್. ಅನಂತನಾರಾಯಣ, ತ. ರಾ. ಸುಬ್ಬ ರಾಯ, ಕೆ. ಎಸ್. ರಾಮಕೃಷ್ಣಮೂರ್ತಿ–ಇವರೆಲ್ಲ ಬೆಳೆದದ್ದು ಆ ಗರಡಿ ಮನೆ ಯಲ್ಲಿಯೇ. 'ವಿಶ್ವ ಕರ್ನಾಟಕ' ಸ್ವಾತಂತ್ರ್ಯ ಬರುವುದಕ್ಕೆ ಕೆಲವು ತಿಂಗಳ ಹಿಂದಿನವರೆಗೆ ಕುಂಟಿಕೊಂಡು ನಡೆದು ಅವಸಾನವಾಯಿತು. ಆಮೇಲೆ ಕೆಲದಿನ ಕನ್ನಡದಲ್ಲಿ 'ಹರಿಜನ' ತಂದರು, ಕೃಷ್ಣಶರ್ಮ, ಎಂ. ಎಸ್. ಚಿಂತಾಮಣಿ ಅವರ 'ವಾಹಿನಿ' ಪತ್ರಿಕೆಗೆ ಅಂಕಣ ಬರೆದರು– 'ಮಾತಿನ ಮಂಟಪ' ಆಮೇಲೆ ಆ ಅಂಕಣ 'ಸಂಯುಕ್ತ ಕರ್ನಾಟಕ'ದಲ್ಲಿ ಮುಂದುವರಿಯಿತು.

ಶರ್ಮರು ಬೆನ್ನುತಟ್ಟಿ ಮುಂದಕ್ಕೆ ತಂದ ಲೇಖಕರೂ ಕಲಾವಿದರೂ ಲೆಕ್ಕವಿಲ್ಲದಷ್ಟು ಮಂದಿ. ಎಷ್ಟೋ ವೇಳೆ ಸುಧಾರಣೆಯಾದ ಮೇಲೆ ಅದರಲ್ಲಿ ಆ ತರುಣ ಲೇಖಕರ ಬರಹಕ್ಕಿಂತ ಶರ್ಮರದೇ ಹೆಚ್ಚುಭಾಗ ಉಳಿಯುತ್ತಿ ದ್ದುದೂ ಉಂಟು. ಇಂಥ ಸಾಹಿತ್ಯ ಕೈಂಕರ್ಯ ಮಾಡಿದವರು ವಿರಳ. ಎಷ್ಟೋ ಜನ ಬರಹಗಾರರ ಕೃತಿಗಳನ್ನು ಸವರಿಸಿ ಸುಧಾರಿಸುತ್ತಿದ್ದುದಲ್ಲದೆ ಕೃಷ್ಣಶರ್ಮರು ಎಷ್ಟೋ ಸಂದರ್ಭಗಳಲ್ಲಿ ತಾವೇ ಪ್ರಕಾಶಕರೊಡನೆ ವ್ಯವಹರಿಸಿ ಪ್ರಕಟಣೆ ಯನ್ನು ಸುಗಮಗೊಳಿಸಿದ್ದುಂಟು. ಗಮಕಿ ಗುಂಡಿಬಂಡೆ ಬಿ. ಎಸ್. ರಾಮಾಚಾರ್ಯ ರನ್ನು ಕಾವ್ಯಗಾಯನದಲ್ಲಿ ತೊಡಗಿಸಿದವರು ಕೃಷ್ಣಶರ್ಮರೇ. ಆಮೇಲಿನ ದಿನ ಗಳಲ್ಲಿ ಗಣ್ಯರೆನಿಸಿದ ಅರ್ಚಿಕ ವೆಂಕಟೇಶ ಮೊದಲಾದವರನ್ನೆಲ್ಲ ಪತ್ರಿಕೋದ್ಯಮ ದಲ್ಲಿ ನೆಲೆಗೊಳಿಸಿದವರು ಕೃಷ್ಣಶರ್ಮರು. ೧೯೪೦ ರ ದಶಕದಲ್ಲಿ ಬೆಂಗಳೂರಿ ನಲ್ಲಿದ್ದು ಕೃಷ್ಣಶರ್ಮರ ಆಪ್ತವಲಯ ಸೇರಿದ್ದ ಬಸವರಾಜ ಕಟ್ಟೀಮನಿ ಅವರು ತಮ್ಮ ಪ್ರಸಿದ್ಧ 'ಜ್ವಾಲಾಮುಖಿಯ ಮೇಲೆ' ಕಾದಂಬರಿಯಲ್ಲಿ ತಂದಿರುವ ರಾಯರು ಎಂಬ ಪಾತ್ರ ಕೃಷ್ಣಶರ್ಮರನ್ನೇ ಮನಸ್ಸಿನಲ್ಲಿರಿಸಿಕೊಂಡು ನಿರ್ಮಿ ಸಿದ್ದು. ಕೃಷ್ಣಶರ್ಮರು ಎಷ್ಟೋ ವಿಷಯಗಳಲ್ಲಿ ಪಥಪ್ರದರ್ಶಕ ಆದ್ಯರಾದರು. ಕನ್ನಡದಲ್ಲಿ ಅಂಕಣ ಬರಹಕ್ಕೆ ಚಾಲನೆ ನೀಡಿದವರು ಕೃಷ್ಣಶರ್ಮರೇ. ಅವರ

ಅಂಕಣಗಳು 'ಸಂಯುಕ್ತ ಕರ್ನಾಟಕ', 'ಕರ್ಮವೀರ', 'ಪ್ರಜಾಮತ', 'ವಾಣಿ', 'ಪ್ರಜಾವಾಣಿ', 'ಕನ್ನಡಪ್ರಭ' ಮೊದಲಾದ ನಾಲ್ಕಾರು ಪತ್ರಿಕೆಗಳಲ್ಲಿ ಪ್ರಕಟಗೊಂಡವು.

ವ್ಯಕ್ತಿಚಿತ್ರಣವನ್ನು ಸಾಹಿತ್ಯದ ಪ್ರಾಕಾರಕ್ಕೆ ಏರಿಸಿದವರೂ ಸಿದ್ದವನಹಳ್ಳಿ ಕೃಷ್ಣಶರ್ಮರೇ. ಅವರು ಸರ್ದಾರ್ ಪಟೇಲ್ ಮುಂತಾದವರನ್ನು ಚಿತ್ರಿಸಿದ 'ಕುಲದೀಪಕರು' ಬರೆಯುವುದಕ್ಕೆ ಹಿಂದೆ ಅಂಥ ಸಾಹಿತ್ಯ ಬಂದಿರಲಿಲ್ಲ ಎಂದೇ ಹೇಳಬಹುದು. ಎಲ್ಲಿಯೋ ವಿರಳವಾಗಿ ಹಲಕೆಲವು ವ್ಯಕ್ತಿಪರಿಚಯಗಳು ಪ್ರಕಟವಾಗಿದ್ದಿರಬಹುದು. ಆದರೆ ಅದರಲ್ಲಿ ಕಲೆಗಾರಿಕೆ ತುಂಬಿದವರು ಕೃಷ್ಣಶರ್ಮರು. ಗಾಂಧಿ ಪರಿವಾರದ ಠಕ್ಕರ್‌ಬಾಪಾ, ಮಶ್ರುವಾಲಾ, ಜಮುನಾಲಾಲ್ ಬಜಾಜ್ ಮೊದಲಾದ ನಾಲ್ಕಾರು ವ್ಯಕ್ತಿಗಳ ಸುಂದರ ಆಕರ್ಷಕ ಚಿತ್ರಣವನ್ನು ಶರ್ಮರು 'ದೀಪಮಾಲೆ' ಸಂಕಲನದಲ್ಲಿ ನೀಡಿದರು.

ಕೃಷ್ಣಶರ್ಮರ ಪ್ರಕಟಿತ ಕೃತಿಗಳ ಪ್ರಮಾಣ ಅಗಾಧ: ೧೫೦ ಕ್ಕೂ ಹೆಚ್ಚು ಹಿಂದೀ, ಇಂಗ್ಲೀಷ್ ಮೊದಲಾದ ಬೇರೆ ಬೇರೆ ಭಾಷೆಗಳಿಂದ ಶರ್ಮರು ಕನ್ನಡಕ್ಕೆ ತಂದ ಕೃತಿಗಳು ಸುಮಾರು ೧೨೦ ಇದ್ದವು. ಸಂಖ್ಯಾಬಾಹುಳ್ಯದಂತೆ ಅವುಗಳ ವೈವಿಧ್ಯವೂ ಅಚ್ಚರಿ ತರಿಸುವಂಥದೇ. ಅಧ್ಯಾತ್ಮದಿಂದ ಅರ್ಥಶಾಸ್ತ್ರದವರೆಗೆ, ಇತಿಹಾಸದಿಂದ ವಿಜ್ಞಾನದ ವರೆಗೆ ಅವರು ಸ್ಪರ್ಶ ಮಾಡದೆ ಬಿಟ್ಟ ಪ್ರಮುಖ ಕ್ಷೇತ್ರ ಯಾವುದೂ ಇಲ್ಲ. ಇಷ್ಟು ವ್ಯಾಪಕ ಸಾಹಿತ್ಯ ಸೇವೆ ಮಾಡಿದವರು ಹೆಚ್ಚು ಮಂದಿ ಇಲ್ಲ. ಶರ್ಮರಿಗೆ ಅಷ್ಟೊಂದು ಬೇರೆ ಬೇರೆ ವಿಷಯಗಳಲ್ಲಿ ಪ್ರಭುತ್ವ ಹೇಗೆ ಸಿದ್ಧಿಸಿತ್ತು ಎಂಬುದು ಈಗಲೂ ವಿಸ್ಮಯ ತರುವ ಸಂಗತಿಯೇ. ಹಾಗೆ ನೋಡಿದರೆ ಈಗ ಇರುವ ಸೌಕರ್ಯಗಳಲ್ಲಿ ಹತ್ತರಲ್ಲೊಂದರಷ್ಟು ಭಾಗವೂ ಈಗ್ಗೆ ಐವತ್ತು ವರ್ಷ ಹಿಂದಿನ ಆ ದಿನಗಳಲ್ಲಿ ಇರಲಿಲ್ಲ. ವಿಷಯ ಯಾವುದೇ ಆಗಲಿ. ಶರ್ಮರ ಬರಹದಲ್ಲಿ ವಿಶಿಷ್ಟ ಛಾಪು ಇರದೆ ಇರುತ್ತಿರಲಿಲ್ಲ. ಒಮ್ಮೆ ಬರೆದಿದ್ದರು: "ವಿಜ್ಞಾನ ಪುರುಷನು ಪ್ರಪಂಚವನ್ನೇ ಕೃಷ್ಣಾಜಿನದಂತೆ ಸುರುಳಿ ಸುತ್ತಿ ತನ್ನ ಬಗಲೊಳಗಿಟ್ಟುಕೊಂಡಿದ್ದಾನೆ." ಇಂಥ 'ಇಮೇಜರಿ'ಗೆ ಜನ್ಮ ಕೊಡ ಬಲ್ಲವರಾಗಿದ್ದವರು ಕೃಷ್ಣಶರ್ಮರು ಮಾತ್ರ. ಇನ್ನೊಂದು ಕಡೆ ಅವರು ಬರೆದಿದ್ದರು : "ಮನುಷ್ಯನ ಗತಿ ಬೆಳೆಯಿತು; ಆದರೆ ಮನುಷ್ಯನ ಮನ ಬೆಳೆಯಲಿಲ್ಲ. ಭೌತಿಕ ಪ್ರಗತಿ ಆಯಿತು; ಸಾಮಾಜಿಕ ಸನ್ಮತಿ ಬರಲಿಲ್ಲ"; "ವಿಜ್ಞಾನ ಅಹಿಂಸಕವಾಗಬೇಕು; ಅಹಿಂಸೆ ವೈಜ್ಞಾನಿಕವಾಗಬೇಕು." "ವಿಜ್ಞಾನವನ್ನು ಪಳಗಿಸಬೇಕು. ಪಳಗಿಸದಿದ್ದರೆ ಅದು ಕಾಡುಕೋಣ. ಪಳಗಿಸಿದರೆ ಸಾಧುಪ್ರಾಣಿ"; "ಬೆಂಕಿ ಸುಡು

೩೦ ನೇ ಪುಟಕ್ಕೆ

ಗ್ರಾಮ ಸ್ವಾವಲಂಬನೆಯ ವಿಚಾರ :

ಗಾಂಧೀಜಿಯವರಿಂದ ಸ್ಥಾಪಿಸಲ್ಪಟ್ಟಿದ್ದ ಚರಖಾ ಸಂಘದ ವಜ್ರಮಹೋತ್ಸವದ ಆಗಮನ!

–ಖಾದಿ ಮಿಷನ್

ಅಖಿಲ ಭಾರತೀಯ ಚರಖಾ ಸಂಘದ ಸ್ಥಾಪನೆ ೨೪ ಸೆಪ್ಟಂಬರ್ ೧೯೨೫ ರಂದು ಆಯಿತು. ಮಹಾತ್ಮಾ ಗಾಂಧೀಜಿ ಅದರ ಸಂಸ್ಥಾಪಕರು ಮತ್ತು ಮಾರ್ಗದರ್ಶಕರಾಗಿದ್ದರು. ಅವರು ೧೯೪೪ ರಲ್ಲಿ ಚರಖಾ ಸಂಘಕ್ಕೆ ಹೊಸ ರೂಪವನ್ನು ಕೊಟ್ಟರು. ಅವರ ಪ್ರೇರಣೆಯಿಂದ ಚರಖಾ ಸಂಘದ ವಿಕೇಂದ್ರೀಕರಣ ಆಗಬೇಕು ಮತ್ತು ಅದರ ಸೇವಕರು ಸಮಗ್ರ ಗ್ರಾಮ ಸೇವೆಯ ಮೂಲಕ ಮೂಲಭೂತ ಅಗತ್ಯಗಳಲ್ಲಿ ಗ್ರಾಮ ಸ್ವಾವಲಂಬಿಯಾಗುವಂತೆ ಮಾಡಬೇಕೆಂಬ ಉದ್ದೇಶಕ್ಕಾಗಿ ಆ ಸಮಯದಲ್ಲಿದ್ದ ಎಲ್ಲ ರಚನಾತ್ಮಕ ಸಂಸ್ಥೆಗಳ ಸಮ್ಮಿಳಿತವಾದ ಸಮಿತಿಯೊಂದನ್ನು ರಚಿಸಲಾಯಿತು.

೧೯೫೨–೫೩ ರಲ್ಲಿ ಚರಖಾ ಸಂಘವು ಅಖಿಲ ಭಾರತ ಸರ್ವ ಸೇವಾ ಸಂಘದಲ್ಲಿ ವಿಲೀನಗೊಂಡಿತು ಮತ್ತು ಖಾದಿಯ ಸಮಸ್ತ ಕಾರ್ಯವನ್ನು ವಿಕೇಂದ್ರಿತಗೊಂಡಿದ್ದ ಖಾದಿ ಸಂಸ್ಥೆಗಳಿಗೆ ವಹಿಸಿಕೊಡಲಾಯಿತು. ಅವುಗಳಿಗೆ ಧನಸಹಾಯ ಮಾಡಲು ಭಾರತ ಸರ್ಕಾರವು ಅಖಿಲ ಭಾರತ ಖಾದಿ ಗ್ರಾಮೋದ್ಯೋಗ ಆಯೋಗವನ್ನು ಸ್ಥಾಪಿಸಿತು.

೧೯೮೦ ರಲ್ಲಿ ಖಾದಿ ಸೇವಕರ ವಿನಂತಿಯ ಮೇರೆಗೆ ಖಾದಿ ಉದ್ಯಮದಲ್ಲಿ ತೀವ್ರತೆ ತರುವುದಕ್ಕಾಗಿ ಹಾಗೂ ಮಾರ್ಗದರ್ಶನಕ್ಕಾಗಿ ವಿನೋಬಾ "ಖಾದಿ-ಮಿಶನ್" ಎಂಬ ಸಂಸ್ಥೆಯನ್ನು ಸ್ಥಾಪಿಸಿದರು.

ಕಳೆದ ಕೆಲವು ವರ್ಷಗಳಿಂದ ಖಾದಿ ಕಾರ್ಯದ ಎದುರು ಅನೇಕ ಸಮಸ್ಯೆಗಳು ಬಂದಿವೆ. ಈಗ ದೇಶದಲ್ಲಿರುವ ಎಲ್ಲ ಖಾದಿ ಸಂಸ್ಥೆಗಳು ಭಯಂಕರವಾದ ಆರ್ಥಿಕ ಸಂಕಟವನ್ನು ಅನುಭವಿಸುತ್ತಿವೆ. ಲಕ್ಷಾವಧಿ ನೂಲುಗಾರರು ನಿರುದ್ಯೋಗಿಗಳಾಗಿದ್ದಾರೆ. ಸಂಸ್ಥೆಗಳು ವಿಕಪ್ರಕಾರವಾಗಿ ನಷ್ಟದಲ್ಲಿ ಸಿಕ್ಕಿಕೊಳ್ಳುತ್ತಿವೆ. ಖಾದಿ ಆಯೋಗದಿಂದ ಹೂಡಲಾಗಿರುವ ಬಂಡವಾಳವು ಕಷ್ಟದಲ್ಲಿ ಸಿಕ್ಕಿಕೊಂಡಿದೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ಚರಖಾ ಸಂಘದ ವಜ್ರ ಮಹೋತ್ಸವ ಒಂದು ಪ್ರೇರಕ ಸಂದರ್ಭವಾಗಿದೆ.

ಚರಖಾ ಗಾಂಧಿ ವಿಚಾರದರ್ಶನದ ಸರ್ವೋತ್ತಮ ಪ್ರತೀಕವಾಗಿದೆ. ಗಾಂಧೀಜಿ ತಮ್ಮ ಜನ್ಮದಿನವನ್ನು 'ಚರಖಾ ಜಯಂತಿ' ಎಂಬ ರೂಪದಲ್ಲಿ ಆಚರಿಸು

ತ್ತಿದ್ದರು. ಅವರು ಒಂದು ಸಲ ಹೇಳಿದ್ದರು :- **ನಾನು ಹಿಂದೂಸ್ತಾನದ ಸ್ವಾತಂತ್ರ್ಯಕ್ಕಾಗಿ ಕೆಲಸ ಮಾಡಿದ್ದೆ ಎಂಬುದನ್ನು ಮುಂದಿನ ಪೀಳಿಗೆಯು ಬಹುಶಃ ಜ್ಞಾಪಿಸಿಕೊಳ್ಳಲಾರದು. ಆದರೆ ನಾನು ಚರಖಾದ ಪುನರುದ್ಧಾರ ಮಾಡಿದ್ದೆ ಎಂಬ ಕಾರಣಕ್ಕಾಗಿ ಖಂಡಿತವಾಗಿ ನನ್ನನ್ನು ನೆನಪಿಸಿಕೊಳ್ಳುತ್ತಾರೆ."**

ಚರಖಾ ಜಯಂತಿಯ ವಜ್ರಮಹೋತ್ಸವದ ನಿಮಿತ್ತದಿಂದ ನಾವು ಇಡೀ ಖಾದಿ ಆಂದೋಲನಕ್ಕೆ ಹೊಸ ತಿರುವನ್ನು ಕೊಡಲು ಸಾಧ್ಯವಿದೆ. ಈಗ ದೇಶ ಮತ್ತು ಪ್ರಪಂಚಕ್ಕೆಯಾವ ಹೊಸ ಜೀವನ ಮೌಲ್ಯಗಳ ಅವಶ್ಯಕತೆಯಿದೆಯೋ ಅದೇ ರೂಪದಲ್ಲಿ ಮತ್ತು ಹೊಸ ಸಂದರ್ಭದಲ್ಲಿ ನಮಗೆ ಖಾದಿ ಗ್ರಾಮೋದ್ಯೋಗವನ್ನು ಪ್ರಸ್ತುತಗೊಳಿಸಲು ಸಾಧ್ಯವಿದೆ. ನಮ್ಮ ಬಳಿ ಕಳೆದ ೭೫ ವರ್ಷಗಳ ಖಾದಿ ಕೆಲಸದ ಅನುಭವದ ಬಂಡವಾಳವಿದೆ, ಸಂಸ್ಥೆಗಳ ಉತ್ತಮ ಜಾಲವಿದೆ, ಮತ್ತು ಗಾಂಧೀಜಿವರ ಸರ್ವೋದಯ ತತ್ವಶಾಸ್ತ್ರವಿದೆ. ಇವುಗಳ ಆಧಾರದ ಮೇಲೆ ದೂರದೃಷ್ಟಿಯನ್ನಿಟ್ಟುಕೊಂಡು ಮುಂದಿನ ೨೫ ವರ್ಷಗಳಿಗಾಗಿ ಅಂದರೆ ಚರಖಾ ಸಂಘದ ಶತಾಬ್ದಿಯವರೆಗೆ ಕಾರ್ಯಯೋಜನೆಯನ್ನು ತಯಾರಿಸಿದಲ್ಲಿ ಸಮಯಾನುಕೂಲವಾದ ಗುರಿಯನ್ನು ನಿರ್ಧರಿಸಿ ಕಾಲಬದ್ಧ ಕಾರ್ಯಕ್ರಮವನ್ನು ರಚಿಸಬಹುದು.

ಗುರಿ: ಮುಂದಿನ ೨೫ ವರ್ಷಗಳಲ್ಲಿ ದೇಶದ ಒಂದು ಲಕ್ಷ ಗ್ರಾಮಗಳಲ್ಲಿ ಏಳು ವಿಷಯಗಳಲ್ಲಿ ಅಂದರೆ ನಮ್ಮ ಗ್ರಾಮಗಳು (೧) ಆಹಾರ, (೨) ಬಟ್ಟೆ (೩) ವಸತಿ (೪) ಶಿಕ್ಷಣ (೫) ಆರೋಗ್ಯ (೬) ಸಂಸ್ಕೃತಿ (೭) ಉದ್ಯೋಗಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸಬೇಕು. ಗ್ರಾಮ ಸ್ವಾವಲಂಬನೆಯಿಂದಲೇ ನಿಜವಾದ ಗ್ರಾಮ-ಸ್ವರಾಜ್ಯವನ್ನು ಸ್ಥಾಪಿಸಲು ಸಾಧ್ಯ.

ಸಂಘಟನೆ : – ಖಾದಿ ಮಿಶನ್ ಕೇಂದ್ರ ಮಟ್ಟದಲ್ಲಿ ರಚನಾತ್ಮಕ ಸಂಸ್ಥೆಗಳ ಒಂದು ಪ್ರಾತಿನಿಧಿಕ ಸಮಿತಿಯ ರಚನೆಯಾಗಬೇಕು;

– ಗ್ರಾಮಮಟ್ಟದಲ್ಲಿ ಗ್ರಾಮೀಣ ಚರಖಾ ಸಂಘದ ಸ್ಥಾಪನೆಯಾಗಬೇಕು:

– ಯಾವ ಗ್ರಾಮದಲ್ಲಿ ೫ ಕ್ಕಿಂತ ಹೆಚ್ಚು ನೂಲುಗಾರರಿದ್ದಾರೊ ಅಲ್ಲಿ ಸ್ಥಾನೀಯ ಚರಖಾ ಸಂಘದ ಸ್ಥಾಪನೆಯಾಗಬೇಕು;

– ೧೫ ಆಗಸ್ಟ್‌ವರೆಗೆ ಸಮಿತಿಗಳ ರಚನೆಯಾಗಬೇಕು. ಅನಂತರ ೧೧ ಸೆಪ್ಟೆಂಬರ್‌ವರೆಗೆ ಸಂಘಟಕರ ಪ್ರಶಿಕ್ಷಣದ ಕೆಲಸ ಪೂರ್ಣ

ಗೊಳ್ಳಬೇಕು. ಅನಂತರ ೨೪ ಸೆಪ್ಟಂಬರ್‌ನಿಂದ ವಸ್ತ್ರಸ್ವಾವಲಂಬನದ ವ್ಯಾಪಕ ಆಂದೋಳನ ಜಾರಿಗೆ ಬರಬೇಕು.

ಕಾರ್ಯಕ್ರಮ : : (೧) ೨೪ ಸೆಪ್ಟಂಬರಂದು ಎಲ್ಲ ಸಂಸ್ಥೆಗಳ ಸೇವಾ ಕೇಂದ್ರಗಳಲ್ಲಿ ಸ್ವಾವಲಂಬಿ ನೂಲುವ ಸೂತ್ರಯಜ್ಞವನ್ನು ಪ್ರಾರಂಭಿಸಬೇಕು;

(೨) ೨೪ ಸೆಪ್ಟಂಬರ್‌ನಿಂದ ೨ ಅಕ್ಟೋಬರ್‌ವರೆಗೆ ನೂಲುಗಾರಿಕೆಯ ಜೊತೆ ಜೊತೆಗೆ ಖಾದಿ ವಿಚಾರ ಶಿಬಿರಗಳನ್ನು ಸಂಘಟಿಸಬೇಕು;

(೩) ೨ ಅಕ್ಟೋಬರ್‌ದಂದು ಚರಖಾ ಪ್ರದರ್ಶನ, ಖಾದಿಧಾರಿಗಳ ಸಮ್ಮೇಳನ ಮುಂತಾದವುಗಳ ಸಂಘಟನೆಯಾಗಬೇಕು; ವಸ್ತ್ರ ಸ್ವಾವಲಂಬಿತ ಜನರಿಗೆ ಸಮಾರಂಭದಲ್ಲಿ ಖಾದಿಯ ಹಂಚಿಕೆಯಾಗಬೇಕು.

ಹಣಕಾಸು: – ಚರಖಾ ಸಂಘದ ವಜ್ರಮಹೋತ್ಸವದ ಇಡೀ ಕಾರ್ಯಕ್ರಮವನ್ನು ಜನಾಧಾರಿತವಾಗಿಯೇ ನಡೆಸಬೇಕು, ಹೆಚ್ಚಿನ ಕಾರ್ಯಕ್ರಮಗಳು ಹಳ್ಳಿಗಳಲ್ಲಿಯೇ ನಡೆಯಬೇಕು.

ಅಪೇಕ್ಷೆ: (೧) ಸ್ವಾವಲಂಬಿ ನೂಲುಗಾರರಿಗೆ – ಅವರು ಇಷ್ಟಪಟ್ಟಲ್ಲಿ – ಎರಡು ಕದರುಗಳ ಅಂಬರ ಚರಖಾಗಳಿಗಾಗಿ ಬಡ್ಡಿರಹಿತ ಸಾಲವನ್ನು ಕೊಡಬೇಕು;

(೨) ಪ್ರತಿ ಸ್ವಾವಲಂಬಿ ವ್ಯಕ್ತಿಗೆ ೧೦ ಮೀಟರ್‌ವರೆಗೆ ಖಾದಿ ನೇಯ್ಗೆಗಾಗಿ 'ನೇಯ್ಗೆ ಅನುದಾನ' ಕೊಡಬಹುದು. ಇದರಿಂದಾಗಿ ನೂಲುಗಾರರಿಗೆ, ನೇಕಾರರಿಗೆ ಮತ್ತು ಸ್ವಾವಲಂಬಿ ನೂಲುಗಾರರಿಗೆ ಹಂಜಿಯ ಬೆಲೆಯಲ್ಲಿಯೇ ಖಾದಿ ದೊರೆಯಲು ಸಾಧ್ಯವಾಗುವುದು;

(೩) ನೂಲಿಗೆ ಬದಲಾಗಿ ಖಾದಿ ಬಟ್ಟೆ ದೊರೆಯುವಂತೆ ಮಾಡಬೇಕು;

(೪) ಹತ್ತಿಯನ್ನು ಗ್ರಾಮದಲ್ಲಿಯೇ ಬೆಳೆಯುವಂತೆ ರೈತರನ್ನು ಪ್ರೋತ್ಸಾಹಿಸಬೇಕು.

ಸಮಗ್ರ ಸೇವೆ : ಸ್ವಾವಲಂಬನೆಯ ಏಳು ಸೂತ್ರಗಳಲ್ಲಿ ಸಮಗ್ರ ಗ್ರಾಮ ಸೇವೆಯ ದೃಷ್ಟಿಯೂ ಸೇರಿಕೊಂಡಿದೆ. ಇದರ ಅಂಗವಾಗಿ –

೧. ಸಾವಯವ ಕೃಷಿ. ಸ್ವದೇಶಿ, ಗೋಸೇವಾ / ಗೋರಕ್ಷೆ ಮತ್ತು ಪರಿಸರ ಸಂರಕ್ಷಣೆ ;

೨. ಗ್ರಾಮಾಭಿಮುಖವಾದ ಸ್ವಾವಲಂಬಿ ಖಾದಿ ಮತ್ತು ಗ್ರಾಮೋದ್ಯೋಗ.

೧೯ ಪುಟ ನೋಡಿ

ಹೊಸ ಇತಿಹಾಸ ರಚನೆ ಕುರಿತು

–ಎ. ಕೆ. ರಾಯ್

ಒಂದು ಶತಮಾನ ಕಳೆದಾದ ಮೇಲೆ ಸಿಂಹಾವಲೋಕನ ಮಾಡುವುದು ಒಂದು ಪ್ರವೃತ್ತಿ. ಈಗ ತಾನೆ ಕಳೆದುಹೋದ ಯುಗವು ಅನೇಕ ಆಸೆಗಳನ್ನೂ, ನಿರಾಶೆಗಳನ್ನೂ ಉಂಟುಮಾಡಿತ್ತು. ಆದರೆ ಅದೆಲ್ಲವೂ ಗತಕಾಲಕ್ಕೆ ಸೇರಿಹೋಯಿತು. ಈಗ ಇದು ಹೊಸ ಸಹಸ್ರಮಾನ. ಇದರ ಆಗುಹೋಗುಗಳು ಎಂಥವು? ಈ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. ಇದಕ್ಕೆ ಉತ್ತರ ಪಡೆಯಬೇಕಾದರೆ ಮೌಲ್ಯಮಾಪನ ಅಗತ್ಯ. ಹಿಂದಿನ ಸಹಸ್ರಮಾನವು ಇಂದಿನ ಸಹಸ್ರಮಾನಕ್ಕೆ ಏನಾದರೂ ಸಂದೇಶ ಕೊಟ್ಟಿದೆಯೆ? ಒಂದು ವೇಳೆ ಇದ್ದರೆ ಮುಂದಿನ ಯುಗವನ್ನು ರೂಪಿಸಬಹುದಾದಂಥ ಆ ಸಂದೇಶ ಯಾವುದು? ಇದಕ್ಕೆ ಉತ್ತರ ಸುಲಭವಲ್ಲ. ಕಳೆದ ಶತಮಾನವು ಅನೇಕ ಘಟನೆಗಳನ್ನೂ, ಏರಿಳಿತಗಳನ್ನೂ ಕಂಡಿತು. ಅನೇಕ ರಾಷ್ಟ್ರಗಳು ಉನ್ನತಿ, ಅವನತಿ ಹೊಂದಿದವು. ರಶಿಯಾದ ಕ್ರಾಂತಿ ಒಂದು ಮಹತ್ವದ ಘಟನೆ. ಮೊಟ್ಟಮೊದಲ ಬಾರಿಗೆ ಖಾಸಗಿ ಆಸ್ತಿಯನ್ನು ರದ್ದುಗೊಳಿಸಿದಂಥ ಸಮಾಜವಾದಿ ಸಮಾಜದ ರಚನೆಯಾಯಿತು. ನಂತರ ಚೈನಾ ಕ್ರಾಂತಿ ಬಂದಿತು (೧೯೪೯); ೧೯೫೯ ರಲ್ಲಿ ಕ್ಯೂಬಾ ಮತ್ತು ವಿಯಟ್ನಾಂಗಳ ವಿಮೋಚನೆ ಆಯಿತು; ವಸಾಹತುಶಾಹಿಗಳ ವಿರುದ್ಧ ಏಶಿಯಾ, ಆಫ್ರಿಕಾ ಮತ್ತು ಲಾಟಿನ್ ಅಮೆರಿಕಾ ಖಂಡಗಳಲ್ಲಿ ಹೋರಾಟ ನಡೆದು ಅನೇಕ ದೇಶಗಳು ಸ್ವತಂತ್ರಗೊಂಡವು; ಅವುಗಳಲ್ಲಿ ಭಾರತದ ಸ್ವಾತಂತ್ರ್ಯವೂ ಒಂದು. ಒಂದು ಶತಮಾನದಲ್ಲಿ ಪ್ರಪಂಚದ ರಾಜಕೀಯ ನಕ್ಷೆಯಲ್ಲಿ ಗುರುತಿಸಲಾಗದಷ್ಟು ಬದಲಾವಣೆ ಉಂಟಾಯಿತು.

ನೆಹರೂ ತಮ್ಮ "ವಿಶ್ವ ಇತಿಹಾಸದ ನೋಟಗಳು" (Glimpses of World History) ಎಂಬ ಪುಸ್ತಕದಲ್ಲಿ ಟ್ರೋಟಸ್ಕಿಯವರ ಉಲ್ಲೇಖ ಮಾಡುತ್ತ ಯಾರು ಶಾಂತಿಮಯ ಜೀವನವನ್ನು ನಡೆಸಬೇಕೆಂದು ಬಯಸಿದ್ದಾರೋ ಅವರು ಈ ಶತಮಾನದಲ್ಲಿ ಜನ್ಮತಾಳಿ ತಪ್ಪು ಮಾಡಿದ್ದಾರೆ ಎಂಬುದಾಗಿ ಬರೆದಿದ್ದಾರೆ. ಅದು ಅತ್ಯಂತ ತುಮುಲಯುಕ್ತ ಯುಗವಾಗಿತ್ತು. ಹೊಸ ಪದ್ಧತಿಗಳು, ಹೊಸ ವಿಚಾರಗಳು ಹೊಮ್ಮುತ್ತಲೇ ಇದ್ದವು. ಬಂಡವಾಳಶಾಹಿ ಮಣ್ಣುಮುಕ್ಕಿತು. "ಪ್ರತಿಯೊಂದು ಕಣ್ಣಿನಿಂದ ಪ್ರತಿಯೊಂದು ಕಣ್ಣೀರನ್ನು ಒರೆಸಬೇಕು" ಮತ್ತು "ಎಲ್ಲಿ ಮನಸ್ಸು ಭೀತಿ ಮುಕ್ತವೋ, ಎಲ್ಲಿ ಶಿರವು ನೇರವೋ,

ಎಲ್ಲಿ ಜ್ಞಾನ ಮುಕ್ತವೋ" ಎಂಬ ಪ್ರತಿಜ್ಞೆಯನ್ನು ತೆಗೆದುಕೊಳ್ಳುವ ಕಾಲ ಅದಾಗಿತ್ತು. ಇದೇ ಶತಮಾನವು ಪೂರ್ವ ಸಮಾಜವಾದಿ ಯುರೋಪು ಮತ್ತು ಬೃಹತ್ ಸೋವಿಯತ್ತು ಒಕ್ಕೂಟ ಎರಡೂ ನಾಶವಾದುದನ್ನೂ ಕಂಡಿತು.

ಹೀಗೆ ಕಳೆದ ಶತಮಾನವು ಯಾವ ಪೂರ್ವದಿಕ್ಕಿನ ಗಾಳಿಯೊಂದಿಗೆ ಹುಟ್ಟಿಕೊಂಡಿತೋ ಅದು ಪಶ್ಚಿಮ ದಿಕ್ಕಿನ ಗಾಳಿಯೊಂದಿಗೆ ಮುಕ್ತಾಯಗೊಂಡು ಮತ್ತೆ ಪುನರಾರಂಭಗೊಂಡಿತು. ಅದರ ಪ್ರಭಾವ ಭಾರತದ ಮೇಲೂ ಉಂಟಾಯಿತು. ಈಸ್ಟ್ ಇಂಡಿಯಾ ಕಂಪನಿಯ ವಂಶಸ್ಥರು, ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಬಂದವು ಮತ್ತು ಭಾರತದಲ್ಲಿಯ ಕೈಗಾರಿಕೆಗಳನ್ನು ಹಾಳು ಮಾಡಿದವು ಹಾಗೂ ಇಡೀ ದೇಶವನ್ನೇ ತಮ್ಮ ಮಾರುಕಟ್ಟೆಯನ್ನಾಗಿ ಪರಿವರ್ತಿಸಿದವು, ೧೯೯೫ ರಲ್ಲಿ ಜಿನಿವಾದಲ್ಲಿ ವಿಶ್ವ ವಾಣಿಜ್ಯ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಅದು ನಮ್ಮ ದೇಶದ ಅರ್ಥ ವ್ಯವಸ್ಥೆಯ ಮೇಲೆ ಹಿಡಿತವನ್ನು ಸಾಧಿಸಿತು. ಪರಸ್ಪರಾವಲಂಬನೆಯ ಹೆಸರಿನಲ್ಲಿ ಅದೇ ಹಳೇ ಕಾಲದ "ಅಧೀನ ಒಪ್ಪಂದ" ಹೊಸ ರೂಪದಲ್ಲಿ ಮರುಕಳಿಸಿತು.

ಸಾರ್ವಜನಿಕ ಉದ್ಯಮಗಳ ಸಂಖ್ಯೆ ೫ ಇತ್ತು. ಅದು ಕ್ರಮೇಣ ೨೪೬ ಕ್ಕೆ ಏರಿತು. ಅವುಗಳ ಮೂಲ ಬಂಡವಾಳ ೨೯ ಕೋಟಿ ಇದ್ದುದು ೧,೬೮,೩೩೨ ಕೋಟಿಗೆ ಏರಿತು. ಈಗ ಆ ಉದ್ಯಮಗಳನ್ನು ವಿಘಟಿಸುವ ಕೆಲಸ ನಡೆದಿದೆ. ಇದಕ್ಕೆ ಉದಾಹರಣೆ ಎಲ್ಲೆಲ್ಲಿಯೂ ಸಿಗುತ್ತದೆ. ೧೯೫೧ ರಲ್ಲಿ ಸಿಂದ್ರಿ ಗೊಬ್ಬರ ಕಾರ್ಖಾನೆಯನ್ನು ಪ್ರಾರಂಭಿಸಲಾಯಿತು. ಅದನ್ನು ಉದ್ಘಾಟನೆ ಮಾಡುವಾಗ ಪ್ರಧಾನ ಮಂತ್ರಿ ನೆಹರು ಅದನ್ನು "ಭಾರತದ ಹೊಸ ಮಂದಿರ" ಎಂದು ಕರೆದರು. ಈಗ ಅದು ಮುಚ್ಚುವ ಹಂತಕ್ಕೆ ಬಂದಿದೆ. ಇದಕ್ಕೆ ಸಂಬಂಧಿಸಿದವರು ಹೇಳುವ ಕಾರಣ: ಹೊಸ ನೀತಿಯನ್ವಯ ಯೂರಿಯಾವನ್ನು ಸ್ಥಾನೀಯವಾಗಿ ಉತ್ಪಾದಿಸುವುದಕ್ಕಿಂತ ಆಮದು ಮಾಡಿಕೊಳ್ಳುವುದು ಹೆಚ್ಚು ಲಾಭಕರವಾಗಿದೆ. ವಿಶ್ವ ವಾಣಿಜ್ಯ ಸಂಸ್ಥೆಯ ಸೂಚನೆಯಂತೆ ಪ್ರತಿಯೊಂದನ್ನೂ ಪರೀಕ್ಷಿಸಲಾಗುತ್ತದೆ ಮತ್ತು ಖಾಸಗೀಕರಣಗೊಳಿಸಲಾಗುತ್ತದೆ. ೨೦ ನೇ ಶತಮಾನದ ಕೊನೆಯ ಭಾಗದಲ್ಲಿಯ ಸ್ಥಿತ್ಯಂತರಗಳು ಸಮಾಜದ ಮೇಲೆ ಪರಿಣಾಮವನ್ನುಂಟುಮಾಡಿವೆ. ರಶಿಯಾದಲ್ಲಿ ಲೆನಿನ್‌ನನ್ನು ತ್ಯಾಜ್ಯ ಮಾಡಿದರೆ, ಭಾರತದಲ್ಲಿ ಗಾಂಧೀಜಿಯನ್ನು ತ್ಯಾಜ್ಯ ಮಾಡಲಾಯಿತು.

ಈಗ ದುರಾಸೆಯೇ ಮಾನ್ಯ. ಸಾಲವೇ ಸನ್ಮಾನ್ಯ. ವಿದೇಶದ ಪ್ರತಿಯೊಂದು ಪದಾರ್ಥವೂ ಅದು ಭಾಷೆ, ಆಹಾರ, ಬಟ್ಟೆ ಅಥವಾ ನಾಯಿಯೇ ಆಗಿರಬಹುದು ಅದೇ ಎಲ್ಲರಿಗೂ ಇಷ್ಟ. ಸ್ವಾವಲಂಬನೆ ಕಸ, ಪರಾವಲಂಬನೆ

ಚಿನ್ನ. ಒಂದು ಕಡೆಗೆ ಮಾತ್ರ ಹಣ ಸಂಗ್ರಹವಾಗಿ ಇನ್ನೊಂದು ಕಡೆ ಮನುಷ್ಯ ಕ್ಷಯಿಸುವಂಥ ಕಾಲ ಇದಾಗಿದೆ. ಎಲ್ಲ ಜನರನ್ನೂ ಸಮಾನರನ್ನಾಗಿ ಮಾಡಲು ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವ ಎಂಬ ಉದ್ಘೋಷಣೆ ಇತ್ತು. ಈಗ ಅಸಮಾನತೆಯನ್ನುಂಟು ಮಾಡಲು ಖಾಸಗೀಕರಣ, ಉದಾರೀಕರಣ, ವಿಶ್ವೀಕರಣ ಎಂಬ ಘೋಷಣೆ ಇದೆ. ಇಡೀ ಸಮಾಜವೇ ಮಾರುಕಟ್ಟೆಯಾಗಿದೆ, ಸರಿಯಾಗಿ ಹೇಳುವುದಾದರೆ ಕಪ್ಪುಹಣದ ಮಾರುಕಟ್ಟೆಯಾಗಿದೆ. ಇಲ್ಲಿ ಕಪ್ಪುಬಣ್ಣವೇ ಸುಂದರ. ಹಳೇ ಮೂಢನಂಬಿಕೆಗಳು ಹಿಂದಿರುಗಿವೆ. ಸುಶಿಕ್ಷಿತರು ಗಣೇಶನಿಗೆ ಹಾಲು ಕುಡಿಸುತ್ತಾರೆ. ವಿವೇಕಾನಂದರ ಸ್ಥಾನದಲ್ಲಿ ಈಗ ನಾವು ಚಂದ್ರಸ್ವಾಮಿಯನ್ನು ಹೊಂದಿದ್ದೇವೆ. ಮೌಲ್ಯಗಳು ಅಪಮೌಲ್ಯಗೊಂಡಿದ್ದರಿಂದ ವಿಜ್ಞಾನ ತಂತ್ರಜ್ಞಾನಗಳು ೨೦ ನೇ ಶತಮಾನದ ಕೊನೆಯ ಭಾಗದಲ್ಲಿ ನಿಲುಗಡೆಗೆ ಬಂದವು. ಕಂಪ್ಯೂಟರ್ ಕ್ಷೇತ್ರದಲ್ಲಿ ಮಾತ್ರ ಪ್ರಗತಿಯುಂಟಾಯಿತು. ಧರ್ಮ, ಜನಾಂಗ ಮತ್ತು ಪ್ರದೇಶದ ಹೆಸರಿನಲ್ಲಿ ವಿಜ್ಞಾನವನ್ನು ಶಸ್ತ್ರಾಸ್ತ್ರಗಳ ತಯಾರಿಕೆಗಾಗಿ ಉಪಯೋಗಿಸಲಾಗುತ್ತಿದೆ.

ಹಾಗಾದರೆ ಈ ಸಹಸ್ರಮಾನದ ಸಂದೇಶವಾದರೂ ಏನು? ಮಾರುಕಟ್ಟೆಯ ಅರ್ಥಶಾಸ್ತ್ರ, ಪರಾವಲಂಬನೆ, ಪ್ರವಾಸೋದ್ಯಮ ಮತ್ತು ಮೌಲ್ಯಗಳ ಕುಸಿತವೇ ಅಂತಿಮ ಮಾತಾಗಬೇಕೆ ಅಥವಾ ಸ್ವಾಮಿ ವಿವೇಕಾನಂದರ ಕಾಲದಿಂದ ಚಂದ್ರಸ್ವಾಮಿ ಕಾಲದವರೆಗೆ ಅಂದರೆ ೧೮೯೩ ರಿಂದ ೧೯೭೨ರ ವರೆಗಿನ ಕಾಲವನ್ನು ೨೧ನೇ ಶತಮಾನದ ಬೆಳವಣಿಗೆಯೆಂದು ಭಾವಿಸಬೇಕೆ? ಸಿದ್ಧಾಂತಗಳು ಅಥವಾ ತತ್ವಗಳು ವಿಫಲವಾಗಿವೆಯೆಂದೇ ಬಂಡವಾಳಶಾಹಿಗಳು ನಿಃಸಂಕೋಚವಾಗಿ ಹೇಳುತ್ತಾರೆ. ಯಾವ ಆದರ್ಶಗಳೇ ಇಲ್ಲದ ವಿಶ್ವವೇ ಇಂದಿನವರ ಆದರ್ಶವಾಗಿದೆ. ಆದರೆ ಈ ಎಲ್ಲ ಕುಣಿತದ ಮಧ್ಯೆ ಒಂದು ಪ್ರಶ್ನೆ ಉತ್ತರ ರಹಿತವಾಗಿಯೇ ಉಳಿಯುತ್ತದೆ. ಅದು ನಾವು ಮುಂದುವರಿದಿದ್ದೇವೆಯೋ ಅಥವಾ ಹಿಂದುವರಿದಿದ್ದೇವೆಯೋ ಎಂಬುದು. ೧೯೯೧ ರಲ್ಲಿ ಸೋವಿಯೆತ್ ಒಕ್ಕೂಟದ ವಿಘಟನೆಯ ನಂತರ ಕಳೆದ ಶತಮಾನದ ಕೊನೆಯ ದಶಕದಲ್ಲಿ ಬಂಡವಾಳಶಾಹಿ ಯಾವ ಅಡ್ಡಿ ಆತಂಕಗಳಿಲ್ಲದೆ ಮೆರೆಯಿತು, ಆದರೆ ಅದರ ಸಾಧನೆಯಾದರೂ ಏನು? ಇಂದು ಅಮೆರಿಕದ ಸಂಯುಕ್ತ ಸಂಸ್ಥಾನ ಒಂದೇ ಇಡೀ ವಿಶ್ವವನ್ನು ಆಳುತ್ತಿದೆ. ರಶಿಯಾದಲ್ಲಿ ಆರ್ಥಿಕ ಸ್ಥಿತಿ ಕುಲಗೆಟ್ಟಿದೆ. ಅದರ ನೈತಿಕ ಹಾಗೂ ಸಾಮಾಜಿಕ ಹಂದರ ಕುಸಿದಿದೆ. ಭಾರತದಲ್ಲಿಯೂ ಅಂಥದೇ ಪರಿಸ್ಥಿತಿ ಇದೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಬಹಳಷ್ಟು ಪ್ರಗತಿ ಆಗಿದ್ದರೂ ೨೦೦ ದಶಲಕ್ಷ ಜನರು ಬಡತನ ರೇಖೆಯ ಕೆಳಗೆ ಹೋಗಿದ್ದಾರೆ. ವಿದೇಶಾಂಗ ಮಂತ್ರಿ ಜಸ್ವಂತ್‌ಸಿಂಗ್ ಸ್ವತಃ

ವಿಶ್ವೀಕರಣದಿಂದ ಪ್ರಪಂಚದಲ್ಲಿ ಅಸಮಾನತೆ ಉಂಟಾಗಿದೆ ಎಂದು ಹೇಳಿದ್ದಾರೆ. ಶ್ರೀಮಂತ ಮತ್ತು ಬಡವರ ಮಧ್ಯದ ಅಂತರ ಹೆಚ್ಚಾಗಿದೆ. ಎಲ್ಲ ಕಡೆಗೂ ನಿರಾಶೆಯ ಮನೋಭಾವ ಮೂಡಿದೆ. ಇದು ಸಿಯಾಟಲ್‌ನಲ್ಲಿ ನಡೆದ ವಿಶ್ವ ವಾಣಿಜ್ಯ ಸಂಸ್ಥೆಯ ಸಭೆಯ ಸಮಯದಲ್ಲಿ ಆಸ್ಫೋಟನೆಗೊಂಡಿತು. ಹಿನ್ನಡೆ ಮತ್ತು ಹೆಚ್ಚುತ್ತಿರುವ ನಿರುದ್ಯೋಗ ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿ ದೇಶಗಳಲ್ಲಿಯ ಕಾಂಸರ್ವೇಟಿವ್ ಸರ್ಕಾರಗಳನ್ನು ಕೆಳಗಿಳಿಸಲಾಯಿತು. ಹೆಲ್‌ಮೆಟ್ ಕೋಹ್ಲರನ್ನೂ ಸೋಲಿಸಲಾಯಿತು. ಬೊರಿಸ್ ಯಲ್‌ಸ್ಟೀನ್ ಕೂಡ ಸೋಲನ್ನೊಪ್ಪಿ ರಾಜೀನಾಮೆ ಕೊಡಬೇಕಾಯಿತು. ಬಂಡವಾಳಶಾಹಿ ಪದ್ಧತಿ ಗುಣಗಳನ್ನೇ ಕೊಂದುಹಾಕಿತು.

ರ್‍ಯೂಟರ್ ಸಂಸ್ಥೆಯು ತನ್ನ ಒಂದು ಸರ್ವೆಯಲ್ಲಿ ಸಹಸ್ರಮಾನದ ಅತ್ಯಂತ ದೊಡ್ಡ ವ್ಯಕ್ತಿಯನ್ನು ಆಯ್ಕೆ ಮಾಡಲು ವಿಶ್ವದ ಏಳ ಜನನಾಯಕರನ್ನು ಕೇಳಲಾಯಿತು. ಅನೇಕರು ಐನ್‌ಸ್ಟೈನ್, ಗಾಂಧೀ ಮತ್ತು ಮಾರ್ಕ್ಸ್ ಅವರಿಗೆ ಮತ ಕೊಟ್ಟರು. ಸಹಸ್ರಮಾನದ ಕೊನೆಯ ತೀರ್ಪು ಇದು. ಆದರೆ ಈ ಮೂರು ಮಹಾನುಭಾವರು ಪ್ರತಿಪಾದಿಸಿದ್ದ ಸಿದ್ಧಾಂತ ಮತ್ತು ಮೌಲ್ಯಗಳ ಪಾಲನೆ ಆಗಿದೆಯೋ ಗಾಂಧೀಜಿ ಮತ್ತು ಮಾರ್ಕ್ಸ್‌ರ ಬಗ್ಗೆ" ಅವರು "ಪಾಶ್ಚಿಮಾತ್ಯ ಸಂಸ್ಥೆಗಳನ್ನು ವಿಘಟಿಸವುದಕ್ಕಾಗಿಯೇ ತಮ್ಮ ಜೀವನವನ್ನು ಕಳೆದರು ಎಂಬುದಾಗಿ ಟಿಪ್ಪಣಿ ಮಾಡಿದರು. ಇನ್ನು ಆಲ್ಬರ್ಟ್ ಐನ್‌ಸ್ಟೈನ್ ಬಗ್ಗೆ ಉತ್ತಮವಾದ ಪರಿಚಯ ಅವರು ಬರೆದ "ಸಮಾಜವಾದ ಏಕೆ?" ಎಂಬ ಲೇಖನವೇ ಆಗಿದೆ. ಅದರಲ್ಲಿ ಅವರು "ಯಾರು ಆರ್ಥಿಕ ಮತ್ತು ಸಾಮಾಜಿಕ ವಿಷಯವಾಗಿ ತಜ್ಞನಲ್ಲವೋ ಅಂಥವನು ಸಮಾಜವಾದದಂಥ ವಿಷಯವನ್ನು ಕುರಿತು ಮಾತನಾಡುವುದು ಸೂಕ್ತವೊ? ಅನೇಕ ಕಾರಣಗಳ ಆಧಾರದ ಮೇಲೆ ಅದು ಸೂಕ್ತವೆಂದು ಹೇಳುತ್ತೇನೆ. ಇಂದು ಪ್ರಚಲಿತವಿರುವ ಬಂಡವಾಳಶಾಹಿ ಸಮಾಜದಲ್ಲಿಯ ಆರ್ಥಿಕ ದುರ್ವ್ಯವಹಾರವೇ ನನ್ನ ಅಭಿಪ್ರಾಯದಲ್ಲಿ ಎಲ್ಲ ಕೇಡಿನ ಮೂಲವಾಗಿದೆ. ತಾಂತ್ರಿಕ ಪ್ರಗತಿ ಸಾಮಾನ್ಯವಾಗಿ ಎಲ್ಲರ ಕೆಲಸದ ಹೊರೆಯನ್ನು ಕಡಿಮೆ ಮಾಡುವುದರ ಬದಲು ಹೆಚ್ಚು ನಿರುದ್ಯೋಗವನ್ನು ಉಂಟುಮಾಡುತ್ತದೆ. ಈ ರೀತಿ ವ್ಯಕ್ತಿಯ ಸಾಮರ್ಥ್ಯವನ್ನು ಕುಂಠಿತಗೊಳಿಸುವುದನ್ನು ನಾನು ಬಂಡವಾಳಶಾಹಿಯ ಅತ್ಯಂತ ಕೆಟ್ಟ ಸಂಗತಿ ಎಂದು ಭಾವಿಸುತ್ತೇನೆ. ಈ ಕೇಡನ್ನು ಸರಿಪಡಿಸುವ ಒಂದೇ ಒಂದು ಉಪಾಯವೆಂದರೆ ಸಮಾಜವಾದಿ ಅರ್ಥಶಾಸ್ತ್ರದ ಸ್ಥಾಪನೆ. ಉತ್ಪಾದನೆಯ ಸಾಧನಗಳನ್ನು ಸಮಾಜವೇ ಹೊಂದಿರಬೇಕು. ಮತ್ತು ಯೋಜನಾಬದ್ಧವಾಗಿ ಅವುಗಳ ಉಪ

ಯೋಗವಾಗಬೇಕು" ಎಂಬುದಾಗಿ ಹೇಳಿದ್ದಾರೆ. ಇಂದು ಪ್ರಚಲಿತವಾಗಿರುವ ಮಾರುಕಟ್ಟೆ ಅರ್ಥನೀತಿಯು ಇದಕ್ಕೆ ತದ್ವಿರುದ್ಧವಾಗಿದೆ. ಐನ್‌ಸ್ಟನ್ (೧೮೭೯–೧೯೫೫) ಗಾಂಧೀಜಿಯವರ ಬಗ್ಗೆ ಬಹಳ ಗೌರವ ಹೊಂದಿದ್ದರು. ಗಾಂಧೀಜಿಯವರ ಮರಣದ ನಂತರ, "ಇಂಥ ಮಾನವನೊಬ್ಬ ಈ ಭೂಮಿಯ ಮೇಲೆ ನಡೆದಾಡಿದ್ದ ಎಂದು ಮುಂದಿನ ಪೀಳಿಗೆ ನಂಬಲಾರದು" ಎಂಬುದಾಗಿ ಐನ್‌ಸ್ಟನ್ ಅಂದಿದ್ದರು. ಗಾಂಧೀಜಿಯವರ ಜೀವನ ಚರಿತ್ರೆಯ ಲೇಖಕರಾದ ಪ್ಯಾರೇಲಾಲರು, "ಮಹಾತ್ಮ ಆರ್ಥಿಕ ಸಮಾನತೆಗಾಗಿ ಕೆಲಸ ಮಾಡಿದರು" ಎಂದು ಖಚಿತವಾಗಿ ಹೇಳಿದರು. ಈಗ ಶ್ರೀ ಯಶವಂತ ಸಿಂಹ ಇದಕ್ಕೆ ವಿರೋಧವಾಗಿರುವುದನ್ನು ಸೂಚಿಸುತ್ತಿದ್ದಾರೆ. ಕಾರ್ಲ್ ಮಾರ್ಕ್ಸ್ ಆಧುನಿಕ ಸಮಾಜವಾದದ ಜನಕ. ಅವರನ್ನು ಕೂಡ ಸಹಸ್ರಮಾನದ ಅತ್ಯಂತ ದೊಡ್ಡ ಮನುಷ್ಯ ಎಂಬುದಾಗಿ ಆಯ್ಕೆ ಮಾಡಲಾಗಿತ್ತು. ಅವರು ಬಂಡವಾಳಶಾಹಿ ವ್ಯವಸ್ಥೆಯನ್ನು ಮೂಲೋತ್ಪಾಟನೆ ಮಾಡಿ ಅದರ ಸ್ಥಾನದಲ್ಲಿ ಹೊಸ ಪದ್ಧತಿಯನ್ನು ತರಬೇಕೆಂದು ಕಾರ್ಮಿಕರಿಗೆ ಕರೆ ಕೊಟ್ಟಿದ್ದರು. ಆ ಪದ್ಧತಿಯ ಸಾರ "ಪ್ರತಿಯೊಬ್ಬರೂ ತಮ್ಮ ಶಕ್ತ್ಯಾನುಸಾರ ಕೆಲಸ ಮಾಡಬೇಕು ಮತ್ತು ಪ್ರತಿಯೊಬ್ಬರಿಗೂ ಅವರ ಅಗತ್ಯಾನುಸಾರ ಸಿಗಬೇಕು" ಎಂಬುದಾಗಿತ್ತು.

ಈ ಮೂವರು ಮಹಾನ್‌ರ ವಿಚಾರಗಳ ಪರಿಣಾಮ ಅದ್ಭುತವಾಗಿದೆ. ಇದರಲ್ಲಿ ಬಂಡವಾಳಶಾಹಿಯ ಸೋಲು ಇದೆ. ಏಕೆಂದರೆ ಕೊನೆಗೆ ಉಳಿಯುವುದು ಸಿದ್ಧಾಂತವೇ. ಆದ್ದರಿಂದ ಕಳೆದ ಸಹಸ್ರಮಾನದ ಈ ಮೂರು ಅತ್ಯಂತ ದೊಡ್ಡ ಮಾನವರು ಪ್ರತಿಪಾದಿಸಿದ ಮೌಲ್ಯ ಮತ್ತು ಸಿದ್ಧಾಂತಗಳನ್ನು ಎತ್ತಿಹಿಡಿದು ಹೊಸ ಇತಿಹಾಸವನ್ನು ಬರೆಯಬೇಕಾಗಿದೆ. ★

("ಹಿಂದೂ" ಸಾಭಾರ : ಅನು : ಸು. ಕೌ.)

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ವಿಸ್ತಾರದತ್ತ.....................

–ಜಿ. ಎನ್. ದೇವಿ

ಯಾವುದೇ ಒಬ್ಬ ವ್ಯಕ್ತಿ ತನ್ನ ದಿನನಿತ್ಯದ ಐಶ್–ಆರಾಮ ಜೀವನವನ್ನು ಬದಿಗೊತ್ತಿ ಸಮಾಜದ ಒಳಿತಿಗಾಗಿ ಕೆಲಸ ಮಾಡಲು ಏಕೆ ಪ್ರಾರಂಭಿಸುತ್ತಾನೆಂಬ ವಿಷಯ ಬಹಳ ರಹಸ್ಯವಾಗಿದೆ. ಪುರಾಣಗಳು ಈ ರಹಸ್ಯವನ್ನು ಯಾವುದೋ ಒಂದು ಘಳಿಗೆಯಲ್ಲಿ ಉಂಟಾದ ಜ್ಞಾನೋದಯವೆಂದು ಹೇಳಬಹುದು. ಆದರೆ ಮಹಾತ್ಮನೋರ್ವನು ದಕ್ಷಿಣ ಆಫ್ರಿಕಾದ ರೈಲೊಂದರಿಂದ ಹೊರದೂಡಲ್ಪಟ್ಟನೆಂಬ ಕಾರಣದಿಂದಲೇ ಸ್ವಾತಂತ್ರ್ಯದ ಉದ್ದೇಶ್ಯಕ್ಕಾಗಿ ತನ್ನನ್ನು ಅಣಿಗೊಳಿಸಿಕೊಂಡನೆಂದು ಹೇಳುವುದು ಬಾಹ್ಯ ಪರಿಸ್ಥಿತಿಗಳಿಗೆ ಅತಿಯಾದ ಮಹತ್ವವನ್ನು ಕೊಟ್ಟಂತಾಗುತ್ತದೆ. ಎಲ್ಲೆಲ್ಲಿಯೂ ಮತ್ತು ಪ್ರತಿದಿನವೂ ಅನ್ಯಾಯಕ್ಕೆ ಒಳಗಾಗುತ್ತಿರುವಂಥ ವ್ಯಕ್ತಿಗಳ ಸಂಖ್ಯೆ ಅಪಾರವಾಗಿದೆಯೆಂಬುದು ನಮಗೆ ಗೊತ್ತಿದೆ. ಆದರೆ ಅವರಲ್ಲಿಯ ಯಾರೋ ಒಬ್ಬರು ಮಾತ್ರ ಖಚಿತವಾಗಿ ಅಹಂಕಾರಪೂರ್ಣ ಅಸ್ತಿತ್ವವನ್ನು ಬಿಟ್ಟು ಬೇರೊಬ್ಬರಿಗೆ ಕ್ರಿಯಾತ್ಮಕವಾಗಿ ಗೌರವ ಕೊಡಬೇಕೆಂಬ ಜೀವನವಿಧಾನವನ್ನು ಸ್ವೀಕರಿಸುತ್ತಾರೆ. ಅಲ್ಲದೆ, ಆ ರೀತಿ ಮಾಡಿದ ಪ್ರತಿಯೊಬ್ಬರೂ ಮನಸ್ಸನ್ನು ಮೂರಾಬಟ್ಟೆ ಮಾಡುವಂಥ ಗ್ಲಾನಿಯನ್ನು ಎದುರಿಸುತ್ತಾರೆಂದೇನೂ ಇಲ್ಲ. ಸಾತ್ವಿಕತೆ ಮತ್ತು ದೈವಪ್ರೇರಣೆ ಇವೆರಡಕ್ಕೂ ಸಂಬಂಧವಿದೆ ಎಂದು ಹೇಳುವ ಕೆಲ ಸಿದ್ಧಾಂತಗಳಿವೆ. ದೈವೀಕೃಪೆಯಿಂದ ಹುಲುಮಾನವನು ಋಷಿಯಾಗುತ್ತಾನೆಂದೂ ನಂಬಲಾಗುತ್ತದೆ. ಈ ದೈವೀ ಪುರುಷರು ಸಾಮಾನ್ಯವಾಗಿ ಒಳ್ಳೆಯತನವನ್ನು ಪ್ರಕಟಪಡಿಸುವ ಕಾರ್ಯದಲ್ಲಿ ತೊಡಗಿರುವುದನ್ನು ನಾವು ನೋಡುತ್ತೇವಾದ್ದರಿಂದ ಈ ನಂಬಿಕೆ ದೃಢವಾಗಲು ಕಾರಣವಾಗುತ್ತದೆ. ಆದರೆ ಈ ಸಿದ್ಧಾಂತವು ನಂಬಿಕೆಯ ಪರಿಧಿಯ ಹೊರಗೂ ತಾಳಬಲ್ಲದೆ ಎಂಬುದನ್ನು ಆಲೋಚಿಸುವುದು ಸೂಕ್ತವಾಗಿದೆ. ಅವರ ಸಾಧುತನವೇ ಅವರನ್ನು ಸಾಧುಗಳನ್ನಾಗಿ ಮಾಡುತ್ತದೆಂಬುದನ್ನು ನಾವು ಹತ್ತಿರದಿಂದ ಪರಿಶೀಲಿಸಿದಾಗ ಗೊತ್ತಾಗುತ್ತದೆ. ಈ ಸಂಗತಿಗಳೆ ಅವರ ಬದಲಾವಣೆಗೆ ಕಾರಣಗಳೆಂದೂ ಅನಿಸುತ್ತದೆ. ಸಾಧುತ್ವವನ್ನು ಹೊಂದಿರುವವರು ಅದು ಮನುಷ್ಯನ ಮನಸ್ಸಿಗೂ ಮೀರಿದ ಒಂದು ಅಗೋಚರ ಶಕ್ತಿಯ ಕಾರಣದಿಂದಾಗಿ ಇದೆ ಎಂದು ಹೇಳುತ್ತಾ ತಮ್ಮ ಸರಳತೆಯನ್ನು ನಮ್ರತಾಭಾವದಿಂದ ನಿರಾಕರಿಸುತ್ತಾರೆ. ಆದರೆ ನಾವು ಇದನ್ನು ಉದಾರ ಜೀವನವಿಧಾನದ ಬಗ್ಗೆ ಇರುವ ಅವರ ನಿಷ್ಠೆಯೆಂದು ಭಾವಿಸಬೇಕು.

ಧರ್ಮಾಧಾರಿತ ತತ್ವಶಾಸ್ತ್ರಗಳು ಒಳ್ಳೆಯತನವನ್ನು ಕುರಿತು ತಮ್ಮದೇ ಆದ

ವಿವರಣೆಗಳನ್ನು ಕೊಡುತ್ತವೆ. ಇವುಗಳಲ್ಲಿ ಒಬ್ಬನೇ ದೇವದೂತನನ್ನು ದೇವರ ಪ್ರತಿನಿಧಿಯೆಂದು ಗೌರವಿಸುವ ತತ್ವಶಾಸ್ತ್ರಗಳು ಮುಖ್ಯವಾಗಿವೆ. ಇವುಗಳ ವಿವರಣೆಯ ಪ್ರಕಾರ ಒಳ್ಳೆಯತನವೆಂಬುದು ಕೇಡಿನ ಶಕ್ತಿಯ ವಿರುದ್ಧ ಮಾನವನಿಗೂ ಮುಂಚಿತವಾದ ಹಾಗೂ ಅಬಾಧಿತವಾದ ಶಾಶ್ವತ ಶಕ್ತಿಯಾಗಿದೆ. ಮಾನವನ ಅಸ್ತಿತ್ವ ಹಾಗೂ ಇತಿಹಾಸಗಳೆರಡೂ ಶಿಷ್ಟಶಕ್ತಿ ಮತ್ತು ದುಷ್ಟಶಕ್ತಿ ಇವೆರಡಕ್ಕೆ ತನ್ನ ತನ್ನ ಬಲವನ್ನು ಸಿದ್ಧಪಡಿಸಲು ಇರುವ ಪೂರ್ವನಿಯೋಜಿತ ರಣರಂಗಗಳಾಗಿವೆ. ಇಂಥ ತತ್ವಶಾಸ್ತ್ರಗಳ ಅರ್ಥವೇನೆಂದರೆ ತನ್ನದೇ ಆದ ಶಕ್ತಿಗಳನ್ನು ಉಂಟುಮಾಡುವ ಸಾಮರ್ಥ್ಯವಿರುವ ಮಾನವನ ಮನಸ್ಸಿಗೆ ಅದು ಆದಿಭೌತಿಕ ಮತ್ತು ಭೌತಿಕ ಈ ಎರಡು ವಿಷಯಗಳಲ್ಲಿ ಒಂದನ್ನು ಮಾತ್ರ ಆಯ್ಕೆ ಮಾಡಬೇಕಾದ ಕೆಲವು ಮಿತಿಗಳನ್ನು ಹಾಕುವುದು.

ಸಿಗ್‌ಮಂಡ್ ಫ್ರೈಡ್ ಆಲೋಚಿಸಿದಂತೆ ನಾವು ಕೂಡ ಮಾನವನ ಮನಸ್ಸಿನ ಬಗ್ಗೆ ಭಿನ್ನವಾಗಿ ಆಲೋಚಿಸುವುದಾದರೆ ಒಳ್ಳೆಯತನವೆಂಬುದು ಕೇಡಿನ ಅವಳಿಯಲ್ಲ, ಅದು ಸ್ವಾಭಿಮಾನದ ಅವಳಿಯೆಂದೇ ಆಲೋಚಿಸಬೇಕಾಗುತ್ತದೆ. ಆಧುನಿಕ ಮಾನಸಶಾಸ್ತ್ರದ ಪ್ರಕಾರ ಒಬ್ಬ ವ್ಯಕ್ತಿಯಲ್ಲಿ ತನ್ನ ಸ್ವಂತ ಹಿತಚಿಂತನೆಯನ್ನೂ ಮೀರಿ ಏನನ್ನಾದರೂ ಮಾಡಬೇಕೆಂಬ ಇಚ್ಛೆ ಉಂಟಾದಲ್ಲಿ ಅದಕ್ಕೆ ಕಾರಣ ಆಯಾ ವ್ಯಕ್ತಿಯ ಸ್ವಂತ ಗ್ರಹಿಕೆಯೇ ಆಗಿದೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಓರ್ವ ವ್ಯಕ್ತಿಯು ತನ್ನ ಬಗ್ಗೆ ಇರುವ ಒಳ್ಳೆಯತನದ ಚಿತ್ರಣವನ್ನು ಉಳಿಸಿಕೊಳ್ಳುವುದಕ್ಕಾಗಿ ಒಳ್ಳೆಯ ಕೆಲಸದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಮಾನಸಶಾಸ್ತ್ರವು ಹಿಂಸೆ, ದುರಾಸೆ, ಅಪರಾಧ, ವಿಕೃತ ಇಚ್ಛೆ, ಅಸೂಯೆ, ಸ್ವಾರ್ಥ ಮುಂತಾದ ಗುಣಗಳ ಬಗ್ಗೆ ಒಳನೋಟಗಳನ್ನು ಕೊಡುತ್ತದೆಯೇ ವಿನಃ ದಯೆ, ಪರೋಪಕಾರ, ಉದಾತ್ತ ವಿಚಾರಗಳು, ಸದ್ಭಾವನೆಗಳು ಮುಂತಾದ ಗುಣಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಅದು ಸಹಕಾರಿಯಾಗಿಲ್ಲವೆಂದು ವಾದ ಮಾಡುವುದರಲ್ಲಿ ಯಾವ ಪ್ರಯೋಜನವೂ ಇಲ್ಲ. ಈ ಶಾಸ್ತ್ರವು ಮಾನಸಿಕವಾಗಿ ಅಸಮತೋಲನ ಹೊಂದಿದವರನ್ನು ಗುಣಪಡಿಸುವ ಅಗತ್ಯದ ಕಾರಣದಿಂದಾಗಿಯೇ ಅಭಿವೃದ್ಧಿ ಹೊಂದಿರುವುದರಿಂದ ಸಾಮಾಜಿಕವಾಗಿ ಅಪಾಯಕಾರಿಯಾದ ಹಾಗೂ ದೈಹಿಕವಾಗಿ ಅಸಂಗತವಾದ ಪ್ರೇರಣೆಗಳ ಅಧ್ಯಯನಕ್ಕಾಗಿಯಷ್ಟೇ ಅದು ತನ್ನ ಬಹುಪಾಲು ಶಕ್ತಿಯನ್ನು ವ್ಯಯಿಸಿದೆ. ಆದ್ದರಿಂದ ಆಧುನಿಕ ಮಾನಸ ಶಾಸ್ತ್ರವು ಒಳ್ಳೆಯತನವನ್ನು ಕುರಿತು ತೃಪ್ತಿಕರವಾಗಿ ವಿವರಣೆಯನ್ನು ಕೊಡಲಾರದು.

ಪರೋಪಕಾರದ ಬಗ್ಗೆ ನಮ್ಮ ತಿಳುವಳಿಕೆಯ ಮಟ್ಟ ಹೀಗಿರುವಾಗ ನಾವು ಅದನ್ನು ಸೈದ್ಧಾಂತಿಕವಾಗಿ ಮತ್ತು ತತ್ಕಾಲೀನ ಪರಿಸ್ಥಿತಿಗನುಗುಣವಾಗಿ

ಅರ್ಥ ಮಾಡಿಕೊಳ್ಳುವುದರಲ್ಲಿಯೇ ತೃಪ್ತಿಪಡಬೇಕಾಗುತ್ತದೆ. ಆದ್ದರಿಂದ ಕೆಲವು ಉದಾಹರಣೆಗಳನ್ನು ಗಮನಿಸುವುದರಿಂದ ನಮಗೆ ಪ್ರಯೋಜನವಾಗಬಹುದು

ಯಾವುದೇ ಒಂದು ರಾಷ್ಟ್ರೀಯ ವಿಪತ್ತು ಬಂದಾಗ, ಉದಾಹರಣೆಗೆ ಯುದ್ಧ ಬಂದಾಗ, ಪ್ರತಿಯೊಬ್ಬರೂ ತ್ಯಾಗ ಮಾಡಲು ಸಿದ್ಧರಿರುತ್ತಾರೆ. ಒಂದುವೇಳೆ ಈ ವಿಪತ್ತು ಭೂಕಂಪನ, ಬಿರುಗಾಳಿ ಅಥವಾ ಜ್ವಾಲಾಮುಖಿಯಂಥ ಪ್ರಾಕೃತಿಕ ವಿಪತ್ತು ಆಗಿದ್ದರೆ ಹೊರ ದೇಶಗಳಲ್ಲಿಯ ಜನರೂ ಸಹ ಆ ವಿಪತ್ತಿಗೊಳಗಾದವರ ಸಹಾಯಕ್ಕಾಗಿ ಧಾವಿಸುತ್ತಾರೆ ಮತ್ತು ತ್ಯಾಗ ಮಾಡುತ್ತಾರೆಂಬುದನ್ನು ನಾವು ನೋಡುತ್ತೇವೆ. ಸಮುದಾಯಗಳು ತಮ್ಮಲ್ಲಿಯ ಸುಪ್ತ ಸಂವೇದನೆಯನ್ನು ಪುನರ್‌ದರ್ಶಿಸಿಕೊಳ್ಳುವ ವಿಶೇಷ ಘಳಿಗೆಗಳಾಗಿವೆ ಇವು. ಮಾನವ ಸಂಸ್ಕೃತಿ ಎಷ್ಟು ನಾಜೂಕು ಮತ್ತು ಎಷ್ಟು ಸುಲಭವಾಗಿ ನಾಶಗೊಳ್ಳುವಂಥಾದ್ದಾಗಿದೆ ಎಂಬ ಸಂದೇಶವನ್ನು ಪ್ರಾಕೃತಿಕ ವಿಕೋಪ ನಮಗೆ ಕೊಡುತ್ತದೆ. ಆಗ ನಾವು ಸ್ವಯಂ ಪ್ರೇರಣೆಯಿಂದ ನಮ್ಮ ಬದುಕಿನ ಅಖಂಡತೆಯನ್ನು ಉಳಿಸುವುದಕ್ಕಾಗಿ ವಿಪತ್ತಿಗೊಳಗಾದವರ ಸಹಾಯದಲ್ಲಿ ತೊಡಗುತ್ತೇವೆ. ಇಂಥ ಒಳ್ಳೆಯತನದ ಹುಟ್ಟಿಗೆ ಸ್ವಲ್ಪ ಭಯವೂ, ಸ್ವಲ್ಪ ಅನುಕಂಪವೂ ಕಾರಣವಾಗುವುದರ ಜೊತೆಗೆ ಆರಿಸ್ಟಾಟಲನು ವರ್ಣಿಸಿದ ದುಃಖಾಂತ ಅನುಭವದಂತೆಯೂ ಇರುತ್ತದೆ. ಅದು ನಮ್ಮ ಸಂವೇದನಾಶೀಲವನ್ನು ಕ್ಷಣಿಕವಾಗಿ ತ್ವರಿತಗೊಳಿಸುತ್ತದೆ. ಆದರೆ ಅದು ದೀರ್ಘಕಾಲ ತಾಳುವಂಥದ್ದಾಗಿರುವುದಿಲ್ಲ.

ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವಂಥವರ ಜೀವನದಲ್ಲಿ ನಾವು ಇನ್ನೊಂದು ಬಗೆಯ "ಒಳ್ಳೆಯತನ" ಪ್ರಕಟಗೊಳ್ಳುವುದನ್ನು ಕಾಣುತ್ತೇವೆ. ಇದರಲ್ಲಿ ಒಳ್ಳೆಯತನದ ಪ್ರೇರಣೆ ದೀರ್ಘಾವಧಿಯದಾಗಿರುವುದು. ಅದು ಕೇವಲ ಭಾವನಾತ್ಮಕ ಶಕ್ತಿಯಾಗಿ ಉಳಿದಿರದೆ ತರ್ಕಸಮ್ಮತವಾದ ನಿರ್ಮಾಣದ ಸ್ವರೂಪವನ್ನು ಪಡೆಯುತ್ತದೆ. ಅಂಥ ವ್ಯಕ್ತಿಗಳು ಮತ್ತು ಅವರು ರಚಿಸಿ ಕೊಳ್ಳುವ ಸಮೂಹಗಳು ಒಳ್ಳೆಯ ಕೃತಿಗಳ ಅಗತ್ಯವನ್ನು ತಿಳಿಹೇಳುತ್ತವೆ. ಆ ಕೃತಿಗಳು ಮಾನವಕುಲದ ಒಳ್ಳೆಯತನದ ಉದ್ದೇಶ್ಯಗಳನ್ನು ಇಟ್ಟುಕೊಂಡಿರು ತ್ತವೆ. ಆದ್ದರಿಂದ ಸಾಮಾಜಿಕ ನ್ಯಾಯಕ್ಕಾಗಿ, ಶೋಷಿತರ ಹಾಗೂ ಅನಾಥರ ಸಹಾಯಕ್ಕಾಗಿ ಹೋರಾಟ ಮಾಡುತ್ತಿರುವಂಥ ವ್ಯಕ್ತಿಗಳನ್ನು ಅಥವಾ ಸಮೂಹ ಗಳನ್ನು ನಾವು ಹೊಂದಿದ್ದೇವೆ. ಸಾಮಾನ್ಯವಾಗಿ ಅಂಥ ಕೆಲಸದಲ್ಲಿ ನೈತಿಕ ಅಧಿಕಾರವನ್ನು ಪಡೆಯುವ ಒಂದು ಅಂಶ ಇರುತ್ತದೆ. ಅದು ಕೇವಲ ಸಾಮಾ ಜಿಕ ಪ್ರತಿಷ್ಠೆಯಲ್ಲ. ಸಾಮುದಾಯಿಕ ಕೆಲಸದ ಮೂಲಕ ವ್ಯಕ್ತಿಗಳು ಸಹಜ ವಾಗಿ ಪಡೆಯುವ ನೈತಿಕ ಅಧಿಕಾರದಲ್ಲಿ ನಿರ್ದಿಷ್ಟ ಪ್ರಮಾಣದ ಶಾಶ್ವತತೆ

ಯೆಂಬುದು ಇರುತ್ತದೆ. ರಾಜಕೀಯ ಅಧಿಕಾರದಂತೆ ಅದು ಸಾಮಾಜಿಕ ತೀರ್ಪಿನಿಂದ ಬಂದುದಲ್ಲ; ಹಣದಿಂದ ಬಂದುದಲ್ಲ. ಅದನ್ನು ಸ್ಪರ್ಧೆ ಮೂಲಕ ಕಿತ್ತುಕೊಳ್ಳಲೂ ಸಾಧ್ಯವಿಲ್ಲ. ಆದ್ದರಿಂದ ಆ ನೈತಿಕ ಅಧಿಕಾರವು ಒಬ್ಬ ವ್ಯಕ್ತಿಗೆ ತನ್ನ ಕ್ರಿಯಾತ್ಮಕ ಸ್ವಗತಕ್ಕಾಗಿ ಅಪಾರವಾದ ಸ್ವಾತಂತ್ರ್ಯವನ್ನು ಕೊಡುತ್ತದೆ. ಆದರೆ ಈ ಸ್ವಾತಂತ್ರ್ಯದ ಅನುಭವವನ್ನು ನೇರವಾದ ಸ್ವಯಂ ಅನುಭವದ ಮೂಲಕ ಮಾತ್ರ ತಿಳಿಯಲು ಸಾಧ್ಯ. ಇದನ್ನು ಹೋಲಿಕೆಗಳ ಮೂಲಕ ಮಾತ್ರ ವಿವರಿಸಬಹುದು. ಪ್ರಾಣಿ ಜಗತ್ತಿನಿಂದ ದೂರವಾಗಿರುವ ಒಂದು ಕನಸಿನ ಲೋಕಕ್ಕೆ ಸೇರಬೇಕೆಂಬ ಇಚ್ಛೆಯೇ ಪ್ರತಿಯೊಂದು ಸಮಾಜದಲ್ಲಿ ಮತ್ತು ಯುಗದಲ್ಲಿ ವ್ಯಕ್ತಿಗಳು ತೋರ್ಪಡಿಸುವ ಒಳ್ಳೆಯತನದ ಮೂಲ ಸ್ರೋತ್ರವಾಗಿದೆ. ಇದರ ಪ್ರತಿಫಲವಾಗಿ ಅವರ ತ್ಯಾಗ ಮತ್ತು ನಿಷ್ಠೆಯ ಕಾರಣದಿಂದ ದೊರೆಯುವ ಕ್ರಿಯಾತ್ಮಕ ಸ್ವಾತಂತ್ರ್ಯವೇ ಮಾನವನ ಜೀವನವನ್ನು ಪರಿವರ್ತಿಸಬೇಕೆಂಬ ಅವರ ಪ್ರಮತ್ತರೂಪದ ಛಲಕ್ಕೆ ಉರುವಲಾಗಿದೆ. ಒಳ್ಳೆಯತನದ ಕೇಂದ್ರ ಬಿಂದುವಿನಲ್ಲಿ ಅಪಾರವಾದ ಸ್ವಾತಂತ್ರ್ಯವಿದೆ. ಅದುವೆ ಮಾನವನನ್ನು ದೇವಪುರುಷನನ್ನಾಗಿ ಮಾಡುತ್ತದೆ.★

("ಹಿಂದೂ" ಪೋಲಿಯೋದ ಸಾಭಾರ. ಅನು: ಸು. ಕೌ.)

ಗ್ರಾಮ ಸ್ವಾವಲಂಬನೆ

೧೧ ನೇ ಪುಟದಿಂದ

೩. ಪೋಲಿಸ್, ಕೋರ್ಟ್‌ಗಳಿಂದ ಮುಕ್ತಿಗಾಗಿ ಶಾಂತಿ ಸೇನೆಯ ಸಂಘಟನೆ;

೪. ನಿರ್ಭಯರೂ, ನಿರ್ವೈರರೂ, ನಿಷ್ಪಕ್ಷರೂ ಆದಂಥ ಶಿಕ್ಷಕರ ಸಂಘಟನೆ; ಆಚಾರ್ಯಕುಲದ ಸ್ಥಾಪನೆ;

೫. ವ್ಯಸನ ಹಾಗೂ ಸುರಾಪಾನ ನಿಷೇಧ;

೬. ಅಸ್ಪೃಶ್ಯತೆ ನಿವಾರಣೆ ಮತ್ತು ಸರ್ವಧರ್ಮ ಏಕತೆಗಾಗಿ ಸರ್ವಧರ್ಮ ಪ್ರಾರ್ಥನೆಯ ಪ್ರಚಾರ;

೭. ಯೋಗ, ಉದ್ಯೋಗ, ಸಹಯೋಗ – ಈ ಮೂರು ಸೂತ್ರಗಳಾಧಾರಿತ ಶಿಕ್ಷಣ; ೮. ಮಹಿಳಾ ಸಬಲೀಕರಣ;

೯. ಸರ್ವೋದಯ ಪಾತ್ರೆ, ಶಾಂತಿಪಾತ್ರೆ, ಗೋರಕ್ಷಾ ಪಾತ್ರೆ ಮುಂತಾದವುಗಳ ಮೂಲಕ ಮಕ್ಕಳ ಸಂಸ್ಕಾರ ಶಿಕ್ಷಣ.

ಸಮಗ್ರ ಗ್ರಾಮ ಸೇವೆಯಲ್ಲಿ ಇಂಥ ಎಲ್ಲ ರಚನಾತ್ಮಕ ಕಾರ್ಯಗಳು ಸೇರಿವೆ.

ದೇಶದ ಎಲ್ಲ ಗಾಂಧೀಪ್ರಣೀತ ರಚನಾತ್ಮಕ ಸಂಸ್ಥೆಗಳು, ಸಂಘಟನೆಗಳು, ಸೇವಕರು ಚರಖಾ ಸಂಘದ ವಜ್ರ ಜಯಂತಿಯ ಬಗ್ಗೆ ಸಮನ್ವಿತಕಾರ್ಯಕ್ರಮವನ್ನು ಜಾರಿಗೆ ತಂದರೆ ದೇಶದಲ್ಲಿ ಹೊಸ ಆಶೆಯ ಸಂಚಾರ ಉಂಟಾಗುವುದು.★

ಸಹಸ್ರಮಾನದ ಚಿಂತನೆಗಳು

-ಇಂಟರ್‌ನೆಟ್

— **ನಾವು** ಎತ್ತರವಾದ ಕಟ್ಟಡಗಳನ್ನು ಹೊಂದಿದ್ದೇವೆ; ಆದರೆ ನಮ್ಮ ಭಾವನೆಗಳು ಮಾತ್ರ ಚಿಕ್ಕದಾಗಿವೆ. ಹೆದ್ದಾರಿಗಳೇನೋ ವಿಶಾಲ, ಆದರೆ ದೃಷ್ಟಿಕೋನಗಳು ಸಂಕುಚಿತ. ಬಹಳಷ್ಟು ಖರ್ಚುಮಾಡುತ್ತೇವೆ, ಆದರೆ ಸುಖ ಪಡೆಯುವುದು ಬಹಳ ಕಡಿಮೆ. ಖರೀದಿಸುವುದು ಹೆಚ್ಚು ಆದರೆ ಅದರಿಂದ ಪಡೆಯುವ ಸಂತೋಷ ಅಲ್ಪ. ಜ್ಞಾನವೇನೋ ಅಪಾರ ಆದರೆ ತೀರ್ಮಾನ ಸೊನ್ನೆ. ಹೆಚ್ಚು ತಜ್ಞರಿದ್ದಾರೆ, ಆದರೆ ಸಮಸ್ಯೆಗಳೂ ಹೆಚ್ಚು. ಔಷಧಿಗಳು ಅಗಣಿತ ಆದರೆ ಕುಶಲತೆ ಸೊನ್ನೆ.

— ನಾವು ವಿಶಾಲವಾದ ಮನೆಗಳನ್ನು ಹೊಂದಿದ್ದೇವೆ; ಆದರೆ ಕುಟುಂಬಗಳು ಮಾತ್ರ ಚಿಕ್ಕವು. ಬಹಳಷ್ಟು ಸೌಕರ್ಯವಿದೆ: ಆದರೆ ಬಳಿ ಇರುವ ಸಮಯ ಕಡಿಮೆ. ನಾವು ಹೊಂದಿರುವ ಡಿಗ್ರಿಗಳು ಅನೇಕ; ಆದರೆ ಬುದ್ಧಿ ಮಾತ್ರ ಅಸ್ವಸ್ಥ

— ಹೊಟ್ಟೆ ಹೊರೆಯುವುದನ್ನು ಕಲಿತಿದ್ದೇವೆ, ಆದರೆ ಜೀವನವನ್ನಲ್ಲ. ನಮ್ಮ ಹುಟ್ಟಿಗೆ ವರ್ಷಗಳನ್ನು ಸೇರಿಸಿಕೊಂಡಿದ್ದೇವೆ. ಆದರೆ ವರ್ಷಗಳಿಗೆ ಜೀವನವನ್ನು ಸೇರಿಸಲಿಲ್ಲ. ಚಂದ್ರನ ಬಳಿಗೆ ಹೋಗಿ ಹಿಂದಿರುಗಿದ್ದೇವೆ. ಆದರೆ ಹೊಸ ನೆರೆಯುವನನ್ನು ಭೇಟಿಯಾಗುವುದಕ್ಕೆ ರಸ್ತೆ ದಾಟುವುದು ಕಷ್ಟ.

— ಬಾಹ್ಯಾಕಾಶವನ್ನು ಜಯಿಸಿದ್ದೇವೆ; ಆದರೆ ಒಳಗಿನ ಮನೋಕಾಶವನ್ನು ಜಯಿಸಿಲ್ಲ. ಗಾಳಿಯನ್ನು ಶುದ್ಧಗೊಳಿಸಿದ್ದೇವೆ; ಆದರೆ ಒಳಗಿನ ಆತ್ಮವನ್ನು ಕಲುಶಿತಗೊಳಿಸಿದ್ದೇವೆ. ನಾವು ಅಣು ವಿಭಜನೆ ಮಾಡಿದ್ದೇವೆ; ಆದರೆ ನಮ್ಮ ರಾಗ ದ್ವೇಷವನ್ನಲ್ಲ.

— ಆದಾಯ ಹಿರಿದಾಗಿದೆ; ಆದರೆ ನೀತಿ ಕಿರಿದಾಗಿದೆ. ಪ್ರಮಾಣ ಉದ್ದಾಗಿದೆ; ಆದರೆ ಗುಣ ತುಂಡಾಗಿದೆ.

— ಕುಬ್ಜವಾದ ನಡತೆಯ ದೊಡ್ಡ ಮನುಷ್ಯರ ಕಾಲ ಇದು; ಅತಿಯಾದ ಲಾಭ ಮಾಡುತ್ತ ಆಳವಲ್ಲದ ಸಂಬಂಧ ಇಟ್ಟುಕೊಳ್ಳುವ ಕಾಲ ಇದು; ವಿಶ್ವಶಾಂತಿ ಸ್ಥಾಪಿಸುತ್ತ ಗೃಹಕಲಹ ನಡೆಸುವ ಕಾಲ ಇದು. ವಿರಾಮವೇನೋ ಬಹಳಷ್ಟಿದೆ. ಆದರೆ ಖುಷಿಯಿಲ್ಲ. ವಿವಿಧ ಬಗೆಯ ಆಹಾರವಿದೆ; ಆದರೆ ಪೌಷ್ಟಿಕತೆ ವಿರಳ. ★

ವರ್ಡ್ಸ್‌ವರ್ಥ್

-ವಿನೋಬಾ

[ಇದೀ ಆಧ್ಯಾತ್ಮಿಕ ಚಿಂತನದ ಗುರಿ 'ಗುಣಗ್ರಹಣ' ಎಂಬುದಾಗಿ ಭಾವಿಸಿದ್ದ ಸಂತ ವಿನೋಬಾ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು; ಕಾರಾಗೃಹ ವಾಸ ಅನುಭವಿಸಿದ್ದರು; ಆಶ್ರಮಗಳನ್ನು ಸ್ಥಾಪಿಸಿದ್ದರು. ಅವರು ಕೆಲವು ಚಿಂತಕರನ್ನು ರೇಖಾ ಚಿತ್ರಣದಂತೆ ಪರಿಚಯ ಮಾಡಿಕೊಟ್ಟಿದ್ದಾರೆ. ಅಂಥ ಲೇಖನಗಳ ಸರಣಿಯಲ್ಲಿ ಇದು ಹದಿಮೂರನೆಯದು. ಸಂ]

ವರ್ಡ್ಸ್‌ವರ್ಥ್ ಕವಿ ಪ್ರಕೃತಿಯ ಮಹಾನ್ ಉಪಾಸಕರಾಗಿದ್ದರು, ಅವರದೊಂದು ಕವಿತೆಯಿದೆ. ಅದರಲ್ಲಿ ಅವರು ಹಾರುತ್ತಿರುವ ಹಕ್ಕಿಯನ್ನು ಸಂಬೋಧಿಸಿ ಹೀಗೆ ಹೇಳುತ್ತಾರೆ:–

"ನಿನ್ನೊಂದಿಗೆ ನನ್ನನ್ನು ಮೇಲೆ ಎತ್ತಿಕೊಂಡು ಹೋಗು ಇಲ್ಲವೆ ಮೇಲೆ ಹೇಗೆ ಹೋಗಬೇಕೆಂಬುದನ್ನು ನನಗೆ ಕಲಿಸು. ನಿನ್ನ ಸುತ್ತಲೂ ಆ ಎತ್ತರದಲ್ಲಿ ಒಂದು ಹುಚ್ಚುತನ ಆವರಿಸಿದೆ; ಇಲ್ಲಿ ನನ್ನ ಸುತ್ತಲೂ ಹುಡುಗಾಟದ ವಾತಾವರಣ ಆವರಿಸಿದೆ. ನಾನು ಈ ಹುಡುಗಾಟದಿಂದ ಬೇಸತ್ತಿದ್ದೇನೆ; ನಿನ್ನ ಹುಚ್ಚುತನದ ಕೊಂಚ ಅನುಭವವನ್ನು ನನಗೆ ಕೊಡು ..."

"ನಾನು ದೊಡ್ಡವನಾಗುತ್ತಾ ಹೋದಂತೆ ದೇವರಿಂದ ದೂರವಾಗುತ್ತಿದ್ದೇನೆ" ಎಂಬ ಅನಿಸಿಕೆ ವರ್ಡ್ಸ್‌ವರ್ಥ್‌ರಿಗೆ ಇತ್ತು. ಇದರ ಅರ್ಥ ಇಷ್ಟೇ : ಮನುಷ್ಯನು ಜನ್ಮ ಪಡೆದಾಗ ದೇವರಿಂದ ಮಗುವಾಗಿ ಬರುತ್ತಾನೆ. ಆಗ ಅವನು ಪರಮಾತ್ಮನ ಸಮೀಪದಲ್ಲಿರುತ್ತಾನೆ. ಆದ್ದರಿಂದ ಅವನ ಮನಸ್ಸು ಅತ್ಯಂತ ಸರಳವಾಗಿರುತ್ತದೆ. ಅವರು ಬರೆದಿದ್ದಾರೆ; "ನಮ್ಮ ಬಾಲ್ಯದಲ್ಲಿ ಪರಮಾತ್ಮ ನಮ್ಮ ಬಳಿ ಇರುತ್ತಾನೆ." ಆದರೆ ನಿಧಾನವಾಗಿ ಮನುಷ್ಯನು ದೇವರನ್ನು ಮರೆತುಬಿಡುತ್ತಾನೆ ಮತ್ತು ಸಂಸಾರವನ್ನು ಜ್ಞಾಪಿಸಿಕೊಳ್ಳುತ್ತಾನೆ. ಪ್ರಪಂಚದ ಅನೇಕ ಬಣ್ಣಗಳು ಅದಕ್ಕೆ ಹತ್ತುತ್ತವೆ.

ಜೀವನದ ಪ್ರಾತಃಕಾಲವೇ ಬಾಲ್ಯಕಾಲವಾಗಿದೆ. ಬೆಳಗಿನ ಸೌಂದರ್ಯವನ್ನು ನಾವು ದೊಡ್ಡವರಾದ ಮೇಲೆ ಅನುಭವಿಸುವುದಿಲ್ಲ. ಒಂದು ದಿನ ಬೆಳಿಗ್ಗೆ ಆಕಾಶದಲ್ಲಿ ಕಾಮನಬಿಲ್ಲು ಮೂಡಿದೆ. ಆ ವೇಳೆಯಲ್ಲಿ ವರ್ಡ್ಸ್‌ವರ್ಥ್ ತಮ್ಮ ಮನೆಗೆ ಬಂದ ಅತಿಥಿಗಳ ಜೊತೆ ಮಾತನಾಡುತ್ತಿದ್ದಾರೆ.

ಸೌಜನ್ಯದ ನೆಪದಲ್ಲಿ ಇಚ್ಛೆಇದ್ದರೂ ಮಾತನ್ನು ನಿಲ್ಲಿಸಲಿಕ್ಕಾಗದೆ ಕಾಮನ ಬಿಲ್ಲನ್ನು ನೋಡಲು ಹೋಗುವುದಿಲ್ಲ. ನಂತರ ಆ ಬಗ್ಗೆ ಅವರಿಗೆ ಕೆಡುಕೆನಿಸು ತ್ತದೆ. ಅವರು ಅನ್ನುತ್ತಾರೆ, "ನಾನು ದೊಡ್ಡವನಾಗಿರುವುದರಿಂದ ನನ್ನ ರಸಿಕತೆ ಕಡಿಮೆಯಾಗಿದೆ." ಒಂದು ಕಡೆಗೆ ಅವರು ಹೇಳಿದ್ದಾರೆ, "ಸಂಪಾದನೆ ಮಾಡ ಬೇಕು, ಖರ್ಚು ಮಾಡಬೇಕು. ಇದರಲ್ಲಿಯೇ ನಾವು ನಮ್ಮ ಶಕ್ತಿಯನ್ನು ವ್ಯಯ ಮಾಡುತ್ತಿದ್ದೇವೆ."

ಪ್ರತಿಭಾವಂತರಾದ ಸಾಹಿತ್ಯಕಾರರಲ್ಲಿ ಕೆಲವರದು ಪ್ರಾರಂಭಿಕ ಕೃತಿಗಳು ಉತ್ತಮವಾಗಿದ್ದರೆ ಇನ್ನು ಕೆಲವರದು ಅಂತಿಮ ಕೃತಿಗಳು ಉತ್ತಮವಾಗಿರು ತ್ತವೆ. ವರ್ಡ್ಸ್‌ವರ್ಥರ ಪ್ರಾರಂಭಿಕ ಕೃತಿಗಳು ಉತ್ತಮವಾಗಿದ್ದವು.

ಕೆಲವು ಜನರು ಭಕ್ತಿಯ ಆವೇಶದಲ್ಲಿ ಜೋರಾಗಿ ಕುಣಿಯುತ್ತಾರೆ, ಅಳುತ್ತಾರೆ. ನನ್ನ ಮನೋಭಾವ ಇದಕ್ಕೆ ಅನುಕೂಲವಾಗಿಲ್ಲ. ಮನದಲ್ಲಿ ಉದ್ದೇಶಗಳೇನೋ ಇರುತ್ತವೆ. ಆದರೆ ಅವುಗಳನ್ನು ಪ್ರದರ್ಶಿಸುವ, ವ್ಯಕ್ತಪಡಿ ಸುವ ಅಗತ್ಯವೇನೂ ಇರುವುದಿಲ್ಲ. ಅವುಗಳನ್ನೇನಾದರೂ ವ್ಯಕ್ತಪಡಿಸಿದಲ್ಲಿ ಹೇಗೆ ಆವಿ ಹಾರಿಹೋಗುತ್ತದೋ ಆ ರೀತಿ ಭಾವನೆಗಳೂ ಹಾರಿಹೋಗುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ ಅವು ಅವನ ಹೃದಯದಲ್ಲಿ ಸಂಪುಟವಾದಲ್ಲಿ ಅದು ಶಕ್ತಿಯಾಗಿ ಪರಿಣಮಿಸುವುದು. ವರ್ಡ್ಸ್‌ವರ್ಥ್‌ನ ಮಾತಿದೆ, "ದೇವರು ಮನಸ್ಸಿನ ತಳಮಳಕ್ಕಿಂತ ಹೃದಯದ ಅಂತರಾಳವನ್ನು ಹೆಚ್ಚು ಇಷ್ಟಪಡುತ್ತಾನೆ."

ಕವಿ ವರ್ಡ್ಸ್‌ವರ್ಥನು ಎರಡು ಪ್ರಕಾರದ ಮಹಾಪುರುಷರ ವರ್ಣನೆ ಯನ್ನು ಮಾಡಿದಾನೆ. ಒಂದು ಪ್ರಕಾರದವರು ಆಗಸದಲ್ಲಿ ಸಂತೋಷವಾಗಿ ಹಾರುತ್ತಾರೆ; ಇನ್ನೊಂದು ಪ್ರಕಾರದವರು ಆಗಸದಲ್ಲೇ ಹಾರುತ್ತಾರಾದರೂ ತಮ್ಮ ಗೂಡಿನ ಚಿಂತೆಯನ್ನು ಮಾತ್ರ ಬಿಟ್ಟುಗೊಡುವುದಿಲ್ಲ. ವರ್ಡ್ಸ್‌ವರ್ಥ್ ರವರ ಸಮ್ಮುಖದಲ್ಲಿ ಸ್ವರ್ಗ ಮತ್ತು ಭೂಮಿ ಎರಡನ್ನೂ ಐಕ್ಯಗೊಳಿಸುವ ಹಾಗೂ ಸಮನ್ವಯ ಸಾಧಿಸುವ ಸಮಾಜಸೇವಾ ಪಾರಾಯಣನಾದ ಜ್ಞಾನಿ ಇದ್ದಾನೆ ಮತ್ತು ಆತನೇ ಭಕ್ತ.

ಹಕ್ಕಿ ಆಕಾಶದಲ್ಲಿ ಎತ್ತರದಲ್ಲಿ ಹಾರುತ್ತದೆ. ಆದರೂ ಕೂಡ ತನ್ನ ಗೂಡಿನತ್ತ ಅದರ ದೃಷ್ಟಿ ಇರುತ್ತದೆ. ಎರಡು ಕಡೆಗೂ ಗಮನ ಹರಿಸುವುದ ರಿಂದ ಅದರ ಹಾರುವಿಕೆಯು 'ವಿಹಾರ'ವೆಂದು ಕರೆಯಲ್ಪಡುತ್ತದೆ. ವರ್ಡ್ಸ್ ವರ್ಥರ ಪಕ್ಷಿಗೆ ಸ್ವರ್ಗದಲ್ಲಿ ದೇವನಿದ್ದಾನೆ ಮತ್ತು ಗೂಡಿನಲ್ಲಿ ಸಂಸಾರವಿದೆ. ಒಂದು ಕಡೆಗೆ ಸಾರ್ವಜನಿಕ ಸೇವೆಯ ಆಕರ್ಷಣೆಯಿದೆ, ಇನ್ನೊಂದು ಕಡೆ ಈಶ್ವರ ದರ್ಶನದ ಹಸಿವಿದೆ. ಸ್ವರ್ಗ ಮೇಲಿದೆಯಾದ್ದರಿಂದ ಮೇಲೆ ಹೋಗಬೇಕಿದೆ.

ಆದರೆ ನಾಮದೇವನು ವರ್ಡ್ಸ್‌ವರ್ಥರ ಉಪಮೆಗೆ ವಿರುದ್ಧವಾಗಿ ಹೇಳಿದ್ದಾರೆ."ಹೇಗೆ ಸ್ವೈರ ವಿಹಾರದಲ್ಲಿರುವ ಪಕ್ಷಿಯು ತನ್ನ ಮರಿಯನ್ನು ಮನಸ್ಸಿನಲ್ಲಿಟ್ಟುಕೊಂಡಿರುತ್ತದೊ ಹಾಗೆಯೇ ಸಂಸಾರರೂಪಿ ಆಕಾಶದಲ್ಲಿ ನನ್ನ ಮನಸ್ಸು ಅತ್ತಿತ್ತ ಅಲೆದಾಡಿದರೂ ಬಾಲಕನಾಗಿ ಮಲಗಿರುವ ನಿನ್ನ ಮೂಲಸ್ಥಾನದಲ್ಲಿಯೇ ನೆಟ್ಟಿರುತ್ತದೆ." ವರ್ಡ್ಸ್‌ವರ್ಥರ ದೇವರು ಆಕಾಶದಲ್ಲಿ ಮತ್ತು ಸಂಸಾರವೆಂಬುದು ಗೂಡಿನಲ್ಲಿದ್ದರೆ ಅದೇ ನಾಮದೇವರ ಭಗವಂತನು ಗೂಡಿನಲ್ಲಿದ್ದಾನೆ. ಹಕ್ಕಿಯು ಆಕಾಶದಲ್ಲಿ ನಾಲ್ಕುಕಡೆಗೂ ಹಾರುತ್ತಿದೆಯಾದರೂ ಅದರ ಮನಸ್ಸು ಭಗವಂತನಲ್ಲಿಯೇ ಇದೆ.

ಒಂದು ದೃಷ್ಟಿಯಲ್ಲಿ ಇದು ಸ್ವದೇಶಿ ಧರ್ಮ. ನಾವು ಇಡೀ ವಿಶ್ವವನ್ನೇ ಪ್ರೀತಿಸುತ್ತೇವೆ. ಯಾವ ಭೇದ ಭಾವವನ್ನೂ ಮಾಡುವುದಿಲ್ಲ. ನಾವು ವಿಶ್ವ ನಾಗರಿಕರು. ಆದರೆ ಸೇವೆಯನ್ನು ಹತ್ತಿರದ ಕ್ಷೇತ್ರದಲ್ಲಿಯೇ ಮಾಡುತ್ತೇವೆ.

ವರ್ಡ್ಸ್‌ವರ್ಥ್ ಮಿಲ್ಟನನ ವರ್ಣನೆ ಮಾಡಿದ್ದಾರೆ. "ನಿನ್ನ ಆತ್ಮ ನಕ್ಷತ್ರದಂತೆ ಎಲ್ಲರಿಂದಲೂ ದೂರ ಉಳಿದಿದೆ. ನಕ್ಷತ್ರ ಸ್ವಯಂ ಪ್ರಕಾಶಿತವಾಗಿರುತ್ತದೆ. ಎತ್ತರದಲ್ಲಿರುತ್ತದೆ. ಅದೇ ರೀತಿ ನೀನಿದ್ದೀಯೆ."

ವರ್ಡ್ಸ್‌ವರ್ಥ್ ತನ್ನ ಸ್ಮಾರಕದ ವಿಷಯವಾಗಿ ಒಂದು ಕವಿತೆಯಲ್ಲಿ ಹೇಗೆ ಹೇಳಿದ್ದಾರೆ, "ನಾನು ಯಾವ ಹಳ್ಳಿಯಲ್ಲಿ ಇರುತ್ತಿದ್ದೆನೊ ಅಲ್ಲಿ ಒಂದು ಪುಟ್ಟ ಗುಡ್ಡ ಇತ್ತು. ಅಲ್ಲಿ ಬೇಕಾದಷ್ಟು ಕಲ್ಲುಗಳು ಬಿದ್ದಿದ್ದವು. ಅವುಗಳಲ್ಲಿಯ ಒಳ್ಳೊಳ್ಳೆ ಕಲ್ಲುಗಳನ್ನು ಕೆಲಸಗಾರರು ಎತ್ತಿಕೊಂಡು ಹೋದರು. ಆದರೆ ಒಂದು ಕಲ್ಲು ಮಾತ್ರ ವರ್ಷಗಳಿಂದ ಬಿದ್ದಿದೆ. ಅದು ಯಾರನ್ನೂ ಆಕರ್ಷಿಸಲಿಲ್ಲ. ನಾನು ಸತ್ತನಂತರ ಆ ಕಲ್ಲು ಸ್ಮಾರಕವಾಗಲಿ ಮತ್ತು ಅದರ ಮೇಲೆ "ಅನೇಕರಲ್ಲಿ ಒಬ್ಬ" ಎಂದು ಬರೆಯಲ್ಪಡಲಿ.

ಒಟ್ಟಿನಲ್ಲಿ ಕವಿಯ ಈ ಆಕಾಂಕ್ಷೆಯ ಅರ್ಥವಾದರೂ ಏನು ? ವಿಜ್ಞಾನದ ಈ ಯುಗದಲ್ಲಿ ಜ್ಞಾನ – ವಿಜ್ಞಾನ ಪ್ರತಿಯೊಬ್ಬರ ಬಳಿ ತಲುಪುತ್ತದೆ. ನಂತರ ಒಬ್ಬೊಬ್ಬ ವ್ಯಕ್ತಿಯಲ್ಲೂ ಗುಣಗಳ ಸಮುಚ್ಚಯವೇ ಉಂಟಾಗುತ್ತದೆ. ಮತ್ತು ಜನರು ಒಂದಾಗಿ ಕೆಲಸ ಮಾಡುವುದನ್ನು ಕಲಿಯುತ್ತಾರೆ. ವಿಜ್ಞಾನದ ಯುಗದಲ್ಲಿ ಮನುಷ್ಯರು ಸಂಘರೂಪದಲ್ಲಿ ಕೆಲಸ ಮಾಡುವರು. ವರ್ಡ್ಸ್‌ವರ್ಥ್‌ನ ರೀತಿ "ಅನೇಕರಲ್ಲಿ ಒಬ್ಬನಾಗುವುದು."

ಭಗವಾನ್ ಕೃಷ್ಣನೂ ಕೂಡ ಇದೇ ರೀತಿ "ಅನೇಕರಲ್ಲಿ ಒಬ್ಬ" ರಾಗಿದ್ದರು. ದನಗಾಹಿಗಳು ಕೃಷ್ಣನನ್ನು ತಮ್ಮಲ್ಲಿಯ ಒಬ್ಬನೆಂದೇ ತಿಳಿದಿದ್ದರು. ಇಷ್ಟು

ಪುಟ ನೋಡಿ

ಶಿಕ್ಷಣ ವಿಚಾರ............

ಶಿಕ್ಷಣದಲ್ಲಿ ಗುಣಾತ್ಮಕ ಸುಧಾರಣೆಗಾಗಿ ಸಲಹೆಗಳು

–N.C.E.R.T. ವರದಿ

ಹೊಸದಿಲ್ಲಿಯಲ್ಲಿರುವ National Council of Educational Research & Training ಸಂಸ್ಥೆಯುವರು ಕಳೆದ ನವೆಂಬರ್ ೧೪ ರಂದು ಕೇಂದ್ರ ಸರ್ಕಾರಕ್ಕೆ "ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಶೈಕ್ಷಣಿಕ ಚೌಕಟ್ಟು" ಎಂಬ ವಿಷಯವಾಗಿ ವರದಿಯನ್ನು ಸಲ್ಲಿಸಿತು. ಈ ವರದಿಗಾಗಿ ಶಿಕ್ಷಣ ಪ್ರೇಮಿಗಳೆಲ್ಲ ಬಹಳ ಕಾತರತೆಯಿಂದ ಕಾಯುತ್ತಿದ್ದರು. ೧೨೮ ಪುಟದ ಈ ಚೌಕಟ್ಟು ೧೯೩೭ ರಲ್ಲಿ ಮಹಾತ್ಮಾ ಗಾಂಧೀಜಿಯವರು ಹೇಳಿದ್ದ ಬಹು ಮುಖ್ಯವಾದ ಮಾತನ್ನು ಪ್ರಮುಖವಾಗಿ ಎತ್ತಿಕೊಂಡಿದೆ. "ಶಿಕ್ಷಣ ಪಡೆಯಬೇಕಾಗಿರುವ ಬಾಲಕ ಮತ್ತು ಬಾಲಕಿಯರಲ್ಲಿರುವ ಅತ್ಯುತ್ತಮವಾದುದನ್ನು ಹೊರಗೆಳೆಯುವುದೇ ನಿಜವಾದ ಶಿಕ್ಷಣ. ಅಸಂಬದ್ಧವಾಗಿ ಸಂಗ್ರಹಿಸಿದ ಹಾಗೂ ಅನಗತ್ಯವಾದ ಮಾಹಿತಿಯನ್ನು ವಿದ್ಯಾರ್ಥಿಗಳ ತಲೆಯಲ್ಲಿ ತುಂಬುವುದರಿಂದ ಒಳ್ಳೆಯ ಶಿಕ್ಷಣ ಕೊಡಲು ಸಾಧ್ಯವಿಲ್ಲ. ಅದು ಜಡವಸ್ತುವಾಗಿ ಪರಿಣಮಿಸಿ ವಿದ್ಯಾರ್ಥಿಗಳಲ್ಲಿರುವ ಎಲ್ಲ ಸ್ವಯಂ ಪ್ರತಿಭೆಯನ್ನು ನಷ್ಟ ಮಾಡಿ ಅವರನ್ನು ಕೇವಲ ಯಂತ್ರಗಳನ್ನಾಗಿ ಮಾಡುತ್ತದೆ" ಎಂದು ಗಾಂಧೀಜಿ ಹೇಳಿದ್ದರು.

ಈ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ಪ್ರಶಿಕ್ಷಣ ಸಂಸ್ಥೆ (NCERT) ಯ ಮುಖ್ಯ ಕೆಲಸ ಶಿಕ್ಷಣ ಕ್ಷೇತ್ರದಲ್ಲಿ ನೀತಿ ನಿರೂಪಣೆ ಮತ್ತು ಅದರ ಅನುಷ್ಠಾನ ಈ ವಿಚಾರಗಳಲ್ಲಿ ಕೇಂದ್ರ ಸರ್ಕಾರಕ್ಕೆ ಸಲಹೆ ಕೊಡುವುದು ಮತ್ತು ನೆರವಾಗುವುದು. ಸಾಮಾನ್ಯವಾಗಿ ಪ್ರತಿ ಹತ್ತು ವರ್ಷಗಳಿಗೊಮ್ಮೆ ಎನ್‌ಸಿಇಆರ್‌ಟಿ ಯು ರಾಷ್ಟ್ರೀಯ ಶೈಕ್ಷಣಿಕ ರೂಪರೇಶೆಯ ಚೌಕಟ್ಟನ್ನು ಸಿದ್ಧಪಡಿಸುತ್ತ ಬಂದಿದೆ. ಇದರಲ್ಲಿ ರಾಷ್ಟ್ರದ ಮುಂದೆ ಇರುವ ಸಮಸ್ಯೆಗಳನ್ನು ಹೇಗೆ ಎದುರಿಸಬೇಕೆಂಬ ಬಗ್ಗೆ ಮಾರ್ಗದರ್ಶಿ ಸೂಚನೆಗಳಿರುತ್ತವೆ. ರಾಜ್ಯ ಸರ್ಕಾರಗಳು ಈ ರೂಪರೇಶೆಯ ಮಾರ್ಗದರ್ಶಿ ಸೂತ್ರಗಳನ್ನು ಅನ್ವಯಿಸಿಕೊಳ್ಳುತ್ತವೆ ಇಲ್ಲವೆ ಇವುಗಳನ್ನು ತಮಗೆ ಉಚಿತವೆನಿಸುವಂತೆ ತಮ್ಮದೇ ಆದ ಪಠ್ಯಕ್ರಮ, ಶಿಕ್ಷಣ ವೇಳಾಪಟ್ಟಿ ಇತ್ಯಾದಿಗಳನ್ನು ರಚಿಸಿಗೊಳ್ಳಲು ಉಪಯೋಗಿಸಿಕೊಳ್ಳುತ್ತವೆ.

ಹೊಸ ಪಠ್ಯಕ್ರಮದ ರೂಪುರೇಶೆಯು ಶಿಶುವಿಹಾರದಿಂದ ಹಿಡಿದು

ಪ್ರೌಢಶಾಲಾ ಶಿಕ್ಷಣದ ವರೆಗಿನ ಎಲ್ಲ ಹಂತಗಳ ಶಾಲಾ ಶಿಕ್ಷಣ ಕುರಿತಾದ ಅಂಶಗಳನ್ನು ಒಳಗೊಂಡಿದೆ. ವ್ಯಾಪಕವಾದ ಪರಾಮರ್ಶೆ, ಚರ್ಚೆ ಇತ್ಯಾದಿ ನಡೆಸಿ ಒಂದು ಚರ್ಚಾ ವಿಷಯುವನ್ನು ತಯಾರಿಸಲಾಯಿತು. ಈ ಚರ್ಚಾ ವಿಷಯು ವನ್ನು ಆಧಾರವಾಗಿಟ್ಟುಕೊಂಡು ರಾಷ್ಟ್ರಾದ್ಯಂತ ಮುಕ್ತ ವಾತಾವರಣದಲ್ಲಿ ನಡೆದ ಚರ್ಚಾಫಲವೇ ಈ ಹೊಸ ಶೈಕ್ಷಣಿಕ ರೂಪರೇಷೆಯು ಚೌಕಟ್ಟು. ಪ್ರಸಿದ್ಧ ಶಿಕ್ಷಣ ತಜ್ಞರು, ಪೋಷಕರು, ಸ್ವಯಂ ಸೇವಾ ಸಂಸ್ಥೆಗಳು, ಶಾಲಾ ಶಿಕ್ಷಣ ಮಂಡಳಿ ಗಳು, ರಾಜ್ಯ ಸರ್ಕಾರಗಳು ಮತ್ತು ಜನಸಮುದಾಯಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಈಗಿನ ಶೈಕ್ಷಣಿಕ ರೂಪರೇಶೆ ರೂಪುಗೊಳ್ಳಲು ಭಾಗಿ ಯಾಗಿದ್ದಾರೆ.

ಈ ಶೈಕ್ಷಣಿಕ ರೂಪರೇಶೆಯು ಚೌಕಟ್ಟಿನಲ್ಲಿ ಒಟ್ಟು ಐದು ಅಧ್ಯಾಯಗಳಿವೆ.

ಮೊದಲನೆ ಅಧ್ಯಾಯದಲ್ಲಿ ಶೈಕ್ಷಣಿಕ ರೂಪರೇಶೆಯುನ್ನು ಹೇಗೆ ಅಭಿವೃದ್ಧಿ ಪಡಿಸಬೇಕು ಮತ್ತು ಅದರ ಅನುಷ್ಠಾನವನ್ನು ಹೇಗೆ ವಿಕೇಂದ್ರಿತಗೊಳಿಸ ಬೇಕು, ಸಮನ್ವಯಗೊಳಿಸಬೇಕು ಎಂಬುದನ್ನು ತಿಳಿಸಲಾಗಿದೆ. ಅಂದರೆ, ಕೇಂದ್ರ ಮಟ್ಟದಲ್ಲಿ ವಿಶಾಲವಾದ ಚೌಕಟ್ಟನ್ನು ಅಭಿವೃದ್ಧಿಪಡಿಸಲಾಗುವುದು; ಅದನ್ನು ರಾಜ್ಯಗಳು ಅಧ್ಯಯನ ಮಾಡಬೇಕು ಮತ್ತು ಸ್ಥಳೀಯ ಪರಿಸರಕ್ಕೆ ಅನುಗುಣವಾಗಿ ವಿಶ್ಲೇಷಣೆ ಮಾಡಬೇಕು.

ಎರಡನೇ ಅಧ್ಯಾಯದಲ್ಲಿ ಈ ಕೆಳಗೆ ಕಾಣಿಸಿದ ಉಪಶೀರ್ಷಿಕೆಗಳು ಇವೆ:-

೧. ಮೌಲ್ಯಾಧಾರಿತ ಶಿಕ್ಷಣ ಮತ್ತು ಅದರಲ್ಲಿ ಇರಬೇಕಾದ ಸಾರ್ವತ್ರಿಕ ವಾದ ಪ್ರಧಾನ ಅಂಶಗಳು;
೨. ಸ್ಥಳೀಯ ಶೈಕ್ಷಣಿಕ ರೂಪರೇಶೆಗಳ ತಯಾರಿಕೆ;
೩. ಶಿಕ್ಷಣದ ಸಾಮಾನ್ಯ ಧ್ಯೇಯೋದ್ದೇಶ್ಯಗಳು;
೪. ವಿದ್ಯಾರ್ಥಿಗಳ ಲಕ್ಷಣ; ೫. ಅಧ್ಯಯನದ ಯೋಜನೆಗಳು;
೬. ವಿವಿಧ ಹಂತಗಳಲ್ಲಿಯು ಶೈಕ್ಷಣಿಕ ರೂಪರೇಶೆಗಳು;
೭. ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಹಂತದಲ್ಲಿ ಕ್ರಿಯಾಶಿಕ್ಷಣ, ಕಲಾಶಿಕ್ಷಣ, ಆರೋಗ್ಯ ಮತ್ತು ದೈಹಿಕ ಶಿಕ್ಷಣ;
೮. ಬೋಧನಾ ಕೌಶಲ ೯. ಶಿಕ್ಷಣದ ಮಾಧ್ಯಮ
೧೦. ಬೋಧನಾ ಅವಧಿ ೧೧. ಮುಕ್ತ ಅಧ್ಯಯನ ಪದ್ಧತಿ

ಈ ಕೆಳಗಿನವುಗಳು ಈ ಹೊಸ ಶಾಲಾ ಶಿಕ್ಷಣದ ಗುಣವಿಶೇಷಗಳಾಗಿವೆ:-
— ಆರೋಗ್ಯಕರ, ಸಂತೋಷಪ್ರದ ಮತ್ತು ಒತ್ತಡ ರಹಿತ ಶಿಕ್ಷಣ. ಎಲ್ಲ ಮಕ್ಕಳ

ಬಾಲ್ಯ ಜೀವನದ ಬಗ್ಗೆ ಗಮನ ಮತ್ತು ವಿಷಯಗಳ ಔಪಚಾರಿಕ ಬೋಧನೆ ಮತ್ತು ಪರೀಕ್ಷೆಗಳಿಲ್ಲದ ಶಿಕ್ಷಣ.

- ಪ್ರಾಥಮಿಕ ಶಿಕ್ಷಣದ ಮೊದಲಿನ ಎರಡು ವರ್ಷಗಳಲ್ಲಿ ಕೊಡಲಾಗುವ ಪರಿಸರ ಶಿಕ್ಷಣವು ಭಾಷೆ, ಗಣಿತ ಮತ್ತು ಇತರೆ ಚಟುವಟಿಕೆಗಳಿಂದ ಕೂಡಿದ ಸಮಗ್ರವಾದ ಶಿಕ್ಷಣ.
- ಪ್ರಾಥಮಿಕ ಹಂತದಲ್ಲಿ ಆರೋಗ್ಯಕರ ಮತ್ತು ಕ್ರಿಯಾತ್ಮಕ ಜೀವನ ವಿಧಾನ ಅನುಷ್ಠಾನಕ್ಕೆ ಬರುವಂತೆ ಆರೋಗ್ಯ, ಕಲೆ, ದೈಹಿಕ ಮತ್ತು ಕ್ರಿಯಾ ಶಿಕ್ಷಣಗಳ ಸಂಯೋಜನೆ.
- ಪ್ರೌಢಶಿಕ್ಷಣ ಹಂತದವರೆಗೆ ಗಣಿತವನ್ನು ದಿನನಿತ್ಯದ ಜೀವನಕ್ಕೆ ಹತ್ತಿರ ತರುವುದು ಮತ್ತು ಈಗಿರುವ ವಿಜ್ಞಾನದ ಪ್ರಯೋಗಾಲಯದಲ್ಲಿಯೇ ಗಣಿತದ ಪ್ರಾತ್ಯಕ್ಷಿಕೆಗಾಗಿ ವ್ಯವಸ್ಥೆ.
- ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಂತದಲ್ಲಿ ಆರೋಗ್ಯ ಮತ್ತು ದೈಹಿಕ ಶಿಕ್ಷಣದ ಅಂಗವಾಗಿ ಆಟ, ಸ್ಕೌಟ್ಸ ಮತ್ತು ಗೈಡ್ಸ್, ರೆಡ್‌ಕ್ರಾಸ್ ಮುಂತಾದವುಗಳ ಸೇರ್ಪಡೆ.
- ಪ್ರೌಢಶಿಕ್ಷಣದ ವರೆಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಸಂಯೋಜನೆ.
- ವಿಷಯಾನುಸಾರ ಸಮಾಜ ವಿಜ್ಞಾನದ ಬೋಧನೆ.
- ಹಿಂದೀ ಭಾಷಾ ಅಧ್ಯಯನದಲ್ಲಿ ಮತ್ತು ಪ್ರಾದೇಶಿಕ ಭಾಷೆ/ಮಾತೃಭಾಷೆಗಳ ಅಧ್ಯಯನದಲ್ಲಿ ಸಂಸ್ಕೃತವೂ ಒಂದು ಭಾಗ.
- ರಾಷ್ಟ್ರದ ಆಡಳಿತ ಭಾಷೆಯಾಗಿ ಹಿಂದೀ ಕಲಿಕೆಗೆ ಮಹತ್ವ.
- ಬೇಡಿಕೆ ಮತ್ತು ಶಾಲೆಗಳಲ್ಲಿಯ ಸೌಕರ್ಯಗಳನ್ನು ಅವಲಂಬಿಸಿ ಹೆಚ್ಚುವರಿ ಐಚ್ಛಿಕ ವಿಷಯವಾಗಿ ವಿದೇಶಿ ಭಾಷೆಗಳ ಬೋಧನೆ.
- ಶೈಕ್ಷಣಿಕ ಮತ್ತು ಸಹಶೈಕ್ಷಣಿಕ ವಿಷಯಗಳಲ್ಲಿಯ ಪಾಂಡಿತ್ಯಕ್ಕೆ ಮಹತ್ವ ಮತ್ತು ಅದಕ್ಕಾಗಿ ಸಾಕಷ್ಟು ಸಮಯದ ಮೀಸಲು.

ಮೂರನೇ ಅಧ್ಯಾಯದಲ್ಲಿ ಪ್ರೌಢಶಾಲಾ ಶಿಕ್ಷಣದ ಬಗ್ಗೆ ಈ ಕೆಳಗಿನ ಅಂಶಗಳನ್ನು ಶಿಫಾರಸು ಮಾಡಲಾಗಿದೆ:–

- ಸಂದರ್ಭ, ಸೆಮೆಸ್ಟರ ಪದ್ಧತಿ, ಶೈಕ್ಷಣಿಕ ರೂಪರೇಷೆಗಳ ಅಭಿವೃದ್ಧಿ, ಅಧ್ಯಯನದ ಯೋಜನೆಗಳು; ಬೋಧನಾ ವಿಕಲ್ಪಗಳು, ಬೋಧನಾ ಸಮಯ, ವೃತ್ತಿಪರ ಶಿಕ್ಷಣ, ಮೌಲ್ಯ ಮಾಪನ, ಪ್ರಮಾಣಪತ್ರ ಮತ್ತು ಮುಕ್ತ ಅಧ್ಯಯನ ಪದ್ಧತಿ.

ಪ್ರೌಢ ಶಿಕ್ಷಣವು ಅನೇಕ ವಿಧಗಳಲ್ಲಿ ಗರಿಷ್ಠ ಪ್ರಮಾಣದಲ್ಲಿ ಸವಾಲನ್ನು

ಹಾಕುತ್ತದೆ. ಆದ್ದರಿಂದ ಹದಿಹರೆಯದ ವಯಸ್ಸಿನಲ್ಲಿರುವಂಥ ವಿದ್ಯಾರ್ಥಿಗಳು ತಮ್ಮ ಅಗತ್ಯಗಳು, ಆಸಕ್ತಿಗಳು, ಸಾಮರ್ಥ್ಯಗಳು ಮತ್ತು ಅಭಿರುಚಿಗಳಿಗನು ಗುಣವಾಗಿ ವಿದ್ಯಾಭ್ಯಾಸದ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವಂತಾಗಬೇಕು. ವಿಶೇಷ ಪಾರಂಗತೆ ಬೇಕಾಗಿರುವಂಥ ಶೈಕ್ಷಣಿಕ ವಿಷಯಗಳನ್ನು ಇಲ್ಲವೆ ಉದ್ಯೋಗ ಅಭಿಮುಖವಾದ ವೃತ್ತಿತರಬೇತಿಯನ್ನು ಪಡೆಯಬಹುದು.

ನಾಲ್ಕನೇ ಅಧ್ಯಾಯದಲ್ಲಿ ವಿದ್ಯಾರ್ಥಿಗಳ ಪ್ರಗತಿಯ ವ್ಯವಸ್ಥಿತ ಮಾಪನಕ್ಕಾಗಿ ವಿವಿಧ ಅಳತೆಗೋಲುಗಳನ್ನು ಗೊತ್ತುಮಾಡಲಾಗಿದೆ. ಮೌಲ್ಯ ಮಾಪನದ ಅಂತಿಮ ಉದ್ದೇಶ್ಯ ವಿದ್ಯಾರ್ಥಿಗಳ ವ್ಯಕ್ತಿತ್ವದ ಸಮಗ್ರ ಬೆಳವಣಿಗೆಯೇ ಆಗಿದೆ. ಹತ್ತನೇ ತರಗತಿಯ ಮುಂಚಿನ ಪರೀಕ್ಷೆಗಳನ್ನು ತೆಗೆದು ಹಾಕಿ ಅವುಗಳ ಸ್ಥಳದಲ್ಲಿ ಶಾಲಾ ಮಟ್ಟದಲ್ಲಿಯೇ ಸತತ ಹಾಗೂ ಸಮಗ್ರ ಮೌಲ್ಯಮಾಪನ ನಡೆಯಬೇಕು.

ಹತ್ತು ಮತ್ತು ಹನ್ನೆರಡನೇ ತರಗತಿಗಳ ಕೊನೆಯಲ್ಲಿ ಪರೀಕ್ಷೆ ನಡೆಸುವಂಥ ೩೪ ಪರೀಕ್ಷಾ ಮಂಡಳಿಗಳು ದೇಶದಾದ್ಯಂತ ಇವೆ. ಇವು ನಡೆಸುವ ಪರೀಕ್ಷೆಗಳ ಗುಣಮಟ್ಟಗಳಲ್ಲಿ ಬಹಳಷ್ಟು ಏರುಪೇರು ಇದೆ ಮತ್ತು ಅವುಗಳಲ್ಲಿ ಸಮಾನತೆ ತರಲು ಅನುಕೂಲಕರವಾಗುವಂಥ ಒಂದೇ ರೀತಿಯ ಅಳತೆಗೋಲೂ ಇಲ್ಲ. ಆದ್ದರಿಂದ ವೈದ್ಯಕೀಯ, ತಾಂತ್ರಿಕ, ವ್ಯವಸ್ಥಾಪನದಂಥ ವೃತ್ತಿಶಿಕ್ಷಣ ಕೊಡುವ ಸಂಸ್ಥೆಗಳು ನಡೆಸುವ ಪ್ರವೇಶಾ ಪರೀಕ್ಷೆಗಳು ವಿದ್ಯಾರ್ಥಿಗಳ ಮೇಲೆ, ತಂದೆ-ತಾಯಿಗಳ ಮೇಲೆ ಅನಗತ್ಯವಾದ ಒತ್ತಡವನ್ನು ಉಂಟುಮಾಡಿವೆಯಲ್ಲದೆ ಭ್ರಷ್ಟಾಚಾರ ಹಾಗೂ ಅನಾವಶ್ಯಕ ಖರ್ಚಿಗೆ ದಾರಿ ಮಾಡಿಕೊಟ್ಟಿವೆ. ಆದ್ದರಿಂದ ಗುಣಮಟ್ಟವನ್ನು ಕಾಪಾಡಿಕೊಂಡು ಬರುವಂಥ ಹಾಗೂ ಸಾರ್ವತ್ರಿಕವಾದ ಅಳತೆಗೋಲನ್ನು ಸೂಚಿಸುವಂಥ ಒಂದು ರಾಷ್ಟ್ರಮಟ್ಟದ ಸಮಿತಿಯನ್ನು ರಚಿಸುವುದು ಬಹಳ ತುರ್ತಾದ ಅಗತ್ಯವಾಗಿದೆ. ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ೧೯೯೨ರ 'ಕ್ರಿಯಾ ಯೋಜನೆ'ಗಳ ಶಿಫಾರಿಸಿನ ಮೇರೆಗೆ ರಾಷ್ಟ್ರೀಯ ಮೌಲ್ಯಮಾಪನಾ ಸಂಸ್ಥೆಯನ್ನು ಸ್ಥಾಪಿಸಬೇಕು.

ಐದನೇ ಅಧ್ಯಾಯದಲ್ಲಿ ರಾಷ್ಟ್ರೀಯ ಶೈಕ್ಷಣಿಕ ರೂಪರೇಶೆಯ ಚೌಕಟ್ಟನ್ನು ಕಾರ್ಯಗತಗೊಳಿಸುವ ವಿಕಲ್ಪಗಳನ್ನು ಸೂಚಿಸಲಾಗಿದೆ.

ಮುಖ್ಯೋಪಾಧ್ಯಾಯರು ಮತ್ತು ಪ್ರಾಂಶುಪಾಲರ ಪಾತ್ರ ಅನುಷ್ಠಾನದ ಹಂತದಲ್ಲಿ ಬಹು ಪ್ರಮುಖವಾಗಿದೆ. ಆದ್ದರಿಂದ ಸೂಕ್ತವ್ಯಕ್ತಿಗಳ ಆಯ್ಕೆ ಹಾಗೂ ಅವರಿಗೆ ಸೇವಾ ಅವಧಿಯಲ್ಲಿ ಪ್ರಶಿಕ್ಷಣ ಅಗತ್ಯವಾಗುತ್ತದೆ.

ನೀತಿ ಬೋಧನೆಗೂ ಮಹತ್ವವನ್ನು ಕೊಡಬೇಕು, ವಿವಿಧ ಧರ್ಮಗಳ

ಸಾಧು-ಸಂತರ ಜೀವನ ಮತ್ತು ಬೋಧನೆಗಳ ಪರಿಚಯುವನ್ನು ವಿದ್ಯಾರ್ಥಿಗಳಿಗೆ ಮಾಡಿಕೊಡಬೇಕು. ವಿಶೇಷ ಗಮನದ ಅಗತ್ಯವಿರುವ ವಿದಾರ್ಥಿಗಳಿಗೆ ಅವರನ್ನೆ ಕೇಂದ್ರವನ್ನಾಗಿಟ್ಟು ಕೊಂಡು ಬೋಧನೆ ಮಾಡುವ ಹಾಗೂ ಸಹಕಾರಾಧಾರಿತ ಬೋಧನೆ ಮಾಡುವ ಶಾಲೆಯುಲ್ಲಿ ತರಬೇತಿಗೊಳಿಸಿ ಅವರನ್ನು ಮುಖ್ಯವಾಹಿನಿಗೆ ಸೇರಿಸಬೇಕು.

ಈ ರಾಷ್ಟ್ರೀಯು ಶೈಕ್ಷಣಿಕ ರೂಪರೇಖೆಯು ಚೌಕಟ್ಟನ್ನು ಅನುಷ್ಠಾನಗೊಳಿಸಿದಲ್ಲಿ ದೇಶದ ಶಿಕ್ಷಣ ಪದ್ಧತಿಯುಲ್ಲಿ ಬಹಳಷ್ಟು ಸುಧಾರಣೆ ಆಗುವುದು. ಎಲ್ಲ ರಾಜ್ಯ ಸರ್ಕಾರಗಳು ತಮ್ಮ-ತಮ್ಮ ಪಠ್ಯ ಪುಸ್ತಕಗಳನ್ನು ಈ ಹೊಸ ರೂಪರೇಶೆ. ಯನ್ನು ಗಮನದಲ್ಲಿರಿಸಿಕೊಂಡು ಮಾರ್ಪಡಿಸಿಕೊಳ್ಳಲು ಮುಂದೆ ಬರಬೇಕು. ★

❖ ❖ ❖

ವರ್ಡ್ಸವರ್ಥ್ ಪುಟ ೨೪

ದೊಡ್ಡ ಭಗವಂತನನ್ನು ಅರ್ಜುನ ತನ್ನ ಕುದುರೆಗಳ ಸಾರಥಿಯನ್ನಾಗಿ ಮಾಡಿದ ಮತ್ತು ಅವನಿಂದ ಕುದುರೆಗಳ ಸೇವೆ ಮಾಡಿಸಿದ. ಇದಕ್ಕೆ ಕಾರಣ ಕೃಷ್ಣ ಅನೇಕರಲ್ಲಿ ಒಬ್ಬನಾಗಿದ್ದನೆಂಬುದೇ ಆಗಿತ್ತು. ಇದೇ ಹೊಸ ಯುಗದ ಆಹ್ವಾನವಾಗಿದೆ ಮತ್ತು ಹೊಸ ಯುಗದ ಚಿಹ್ನೆಯಾಗಿದೆ. ★

('ಮೈತ್ರಿ' ಸಾಭಾರ ಅನು : ಸು. ಕೌ.)

❖ ❖ ❖

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯುನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ - ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯುಮಾಡಿ ವಾರ್ಷಿಕ ಚಂದಾ ೧೦೦/- ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯು ಮುಖಬೆಲೆ ೧೦/- ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯು ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಮ್ರ ಕೋರಿಕೆ.

-ಪ್ರಕಾಶಕರು

 ೮ ನೇ ಪುಟದಿಂದ

ತ್ತದೆ ಎಂಬುದು ವಿಜ್ಞಾನ. ನಮ್ಮ ಮಾತು ಕೇಳದವರಿಗೆ ಬರೆ ಹಾಕು ಎಂಬುದು ವಿಜ್ಞಾನವಲ್ಲ." ಶರ್ಮರ ಅನುವಾದಗಳ ಜೀವಂತಿಕೆ ಕೇವಲ ಭಾಷಾಜ್ಞಾನದಿಂದ ಬಂದುದಲ್ಲ. ಅವರು ವಿಷಯವನ್ನು ಅರಗಿಸಿಕೊಂಡು ಪುನಃ ಸೃಷ್ಟಿ ಮಾಡಿದವರು. ಹೀಗೆ ಅನ್ಯ ಭಾಷೆಯ ನುಡಿಗಳಿಗೆ ಸಂವಾದಿಯಾದ ಕನ್ನಡ ದೇಸೀ ಪ್ರಯೋಗ ಅವರಿಗೆ ಥಟ್ಟನೆ ಸ್ಫುರಿಸುತ್ತಿತ್ತು. ಇದು ಅವರಿಗಿದ್ದ ಒಂದು ದೈವೀ ಶಕ್ತಿ ಎಂದೇ ಹೇಳಬೇಕಾಗುತ್ತದೆ. ಯಾವುದಾದರೂ ಬರಹವನ್ನು ನೋಡಿದರೆ ಅವರಲ್ಲಿ ಲೇಖಕರ ಹೆಸರಿಲ್ಲದಿದ್ದರೂ ಅದು ಕೃಷ್ಣಶರ್ಮರದೇ ಎಂದು ಯಾರಿಗಾದರೂ ಒಡನೆಯೇ ಹೊಳೆಯುಬಲ್ಲಂಥ ವಿಶಿಷ್ಟತೆ ಶರ್ಮರ ಬರಹದಲ್ಲಿ ಇತ್ತು. ಒಮ್ಮೆ ವಡಗೇನಹಳ್ಳಿ ಅಶ್ವತ್ಥನಾರಾಯಣರಾಯರ 'ಬಿಡುಗಡೆಯ ಬೆಲೆ' ಗ್ರಂಥವನ್ನು ವಿಮರ್ಶಿಸುತ್ತಾ ಕುಳಗಂದ ಶಿವರಾಯರು (ನಿರಂಜನ) ರಾಯರ ಶೈಲಿ ಕೃಷ್ಣಶರ್ಮರ ಶೈಲಿಯನ್ನು ಹೋಲುತ್ತದೆ ಎಂದು ಬರೆದಿದ್ದರು. ಅದಾದ ಎಷ್ಟೋ ಸಮಯದ ನಂತರ ಒಮ್ಮೆ ಶಿವರಾಯರನ್ನು ಭೇಟಿಯಾದಾಗ ಅಶ್ವತ್ಥನಾರಾಯಣರು ಕೇಳಿದರು: "ನಿಮಗೆ ಕೃಷ್ಣಶರ್ಮರ ಪರಿಚಯ ಇದೆಯೋ?" "ಇಲ್ಲ" ಎಂದರು. ನಿರಂಜನರು ಅಶ್ವತ್ಥನಾರಾಯಣರಾಯರು ನಕ್ಕು ಹೇಳಿದರು. "ಈ ಪುಸ್ತಕ ನಾನು ಬರೆದದ್ದು ಇಂಗ್ಲಿಷಿನಲ್ಲಿ. ಅದಕ್ಕೆ ಕನ್ನಡರೂಪ ನೀಡಿದವರು ಕೃಷ್ಣಶರ್ಮರೇ". ಕೃಷ್ಣಶರ್ಮರಿಗೆ ತೀರಾ ನಿಕಟವರ್ತಿಯಾಗಿದ್ದ ದ. ರಾ. ಬೇಂದ್ರೆ ಒಮ್ಮೆ ಹೇಳಿದರು: "ಶರ್ಮರಿಗೆ ಶಬ್ದ ಎಂದರೆ ಪ್ರಾಣ. ಆದರೆ ಧ್ವನಿಯ ಗುಹೆಯಲ್ಲಿ ನಾದದ ಹೆಜ್ಜೆ ಪತ್ತೆ ಮಾಡುವುದು ನಾನು ಮಾಡುತ್ತಿರುವ ಕೆಲಸ." "ಕೃಷ್ಣಶರ್ಮರದು ಚಂದ್ರಕಾಂತಶಿಲೆಯಲ್ಲ. ಅದು ಸೂರ್ಯಕಾಂತಶಿಲೆ. ಈ ಸೂರ್ಯಕಾಂತದಲ್ಲಿ ಜೊಳ್ಳಾದುದೆಲ್ಲ ಸುಟ್ಟುಹೋಗಿ ಅವುಗಳ ತಿರುಳಿನ ನಗ್ನಸತ್ಯ ನಮ್ಮನ್ನು ಎದುರಿಸುತ್ತದೆ." ಹೀಗೆ ವರ್ಣಿಸಿದ್ದವರು ವಿ. ಕೃ. ಗೋಕಾಕರು; ಶರ್ಮರು ಕೈಜೋಡಿಸಿದ ಪ್ರಕಟಣೆಗಳದು ಉದ್ದಕ್ಕೂ ವಿಕ್ರಮಗಳೆಂದೇ ಹೇಳಬೇಕಾಗುತ್ತದೆ. ಗಾಂಧಿ ಗ್ರಂಥಮಾಲೆಯ ಇಪ್ಪತ್ತು ಸಂಪುಟಗಳು ಮೈಸೂರಿನ ಪ್ರೊ॥ ಎಂ. ಯಾಮುನಾಚಾರ್ಯರ ನಿರ್ದೇಶನದಲ್ಲಿ ಭಾರತದ ಬೇರಾವುದೇ ಭಾಷೆಗಿಂತ ಮೊದಲು ಪ್ರಕಟಗೊಂಡವು. ಅದಕ್ಕೆ ಕಾರಣವಾದದ್ದು ಕೃಷ್ಣಶರ್ಮರ ಕೌಶಲ, ದಕ್ಷತೆ. ಯಾರದೇ ಬರಹದಲ್ಲಿ ಏನೇ ನ್ಯೂನತೆ ಕಂಡರೂ ಅದನ್ನು ತುಂಬಿಸಬಲ್ಲ ಶಕ್ತಿ, ಉತ್ಸಾಹ, ಅವಧಾನ ಎಲ್ಲವೂ ಶರ್ಮರಲ್ಲಿ ಇದ್ದುದರಿಂದ ಅದು ಸಾಧ್ಯವಾಯಿತು. ಹಲವಾರು ಪತ್ರಿಕೆಗಳ ಸಂಪಾದಕತ್ವದ ಹೊಣೆಯನ್ನೂ

೩೨ ನೇ ಪುಟಕ್ಕೆ

ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ !

– ಸುರೇಂದ್ರ ಕೌಲಗಿ

ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ ಬಹಳ ಹಿರಿದಾಗಿದೆ. ಏಕೆಂದರೆ ಯುವಕರಲ್ಲಿ ಉತ್ಸಾಹ, ಶಕ್ತಿ, ಧೈರ್ಯ, ಭಾವನೆ ಮುಂತಾದ ಪ್ರೇರಕ ಸಂಪನ್ಮೂಲಗಳಿವೆ. ಅಲ್ಲದೆ, ಯುವಕರು ಬಾಲ್ಯ ಮತ್ತು ವೃದ್ಧಾಪ್ಯ ಎಂಬ ಎರಡು ಅವಸ್ಥೆಗಳ ಮಧ್ಯ ಇದ್ದಾರೆ. ಆದ್ದರಿಂದ ಯುವಕರು ಯಾವುದೇ ಒಂದು ಕೆಲಸದಲ್ಲಿ ಮಹತ್ವದ ಪಾತ್ರ ವಹಿಸಬಲ್ಲರು. ಇದುವರೆಗೆ ಈ ಪೃಥ್ವಿಯಲ್ಲಿ ಏನೇನು ಮಹತ್ಸಾಧಾನೆಗಳಾಗಿವೆಯೋ ಅವೆಲ್ಲವೂ ಯುವಕರಿಂದಲೇ ಆಗಿವೆ. ಪ್ರಪಂಚದಲ್ಲಿ ಅತ್ಯಂತ ಪ್ರಾಚೀನ ಸಂಸ್ಕೃತಿಯನ್ನು ಹೊಂದಿರುವ ಭಾರತದಲ್ಲಿ ರಚಿಸಲ್ಪಟ್ಟ ವೇದ-ಉಪನಿಷತ್ತುಗಳ ರಚನಾಕಾರರಲ್ಲಿ ಅನೇಕರು ಯುವ ತಪಸ್ವಿಗಳಾಗಿದ್ದರು; ರಾಮಾಯಣದ ಶ್ರೀರಾಮ ಹದಿಹರೆಯದಲ್ಲೇ ರಾಜ್ಯ ಭೋಗಗಳನ್ನೆಲ್ಲ ತ್ಯಾಗ ಮಾಡಿ ದುಷ್ಟರನ್ನು ಸದೆಬಡಿದು ಮರಳಿ ಅಯೋಧ್ಯೆಗೆ ಬಂದಾಗ ಅವನು ಇನ್ನೂ ಯುವಕನಾಗಿಯೇ ಇದ್ದ; ಮಹಾಭಾರತದಲ್ಲಿ ಪಾಂಚಜನ್ಯವನ್ನು ಊದಿದ ಶ್ರೀಕೃಷ್ಣ, ದೇವದತ್ತವನ್ನು ಊದಿದ ಅರ್ಜುನ ಇಬ್ಬರೂ ಉತ್ಸಾಹಿ ಯುವಕರಾಗಿಯೇ ಇದ್ದರು: ತುಂಬಿ ತುಳುಕುತ್ತಿದ್ದ ತಾರುಣ್ಯದಲ್ಲಿಯೇ ಅರಮನೆಯಿಂದ ಹೊರಬಿದ್ದ ಗೌತಮ, ಮಹಾವೀರರು ಯುವಕರಾಗಿಯೇ ಇದ್ದರು; ಏಸು, ಮಹಮ್ಮದ್ ಪೈಗಂಬರ್ ಇವರು ಸಹ ತಮ್ಮ ಯುವಾ ಅವಸ್ಥೆಯಲ್ಲಿಯೇ ಹೊಸ ಧರ್ಮಗಳನ್ನು ಸ್ಥಾಪಿಸಿದರು; ಅಂತೆಯೇ ಶಂಕರಾಚಾರ್ಯ ಮತ್ತು ಬಸವಣ್ಣನವರು. ಪ್ರಪಂಚದಲ್ಲಿ ಹಿಂದೂ - ಧರ್ಮದ ಶ್ರೇಷ್ಠತೆಯನ್ನು ಮೆರೆದ ವಿವೇಕಾನಂದ ವೀರ ಯುವ ಸನ್ಯಾಸಿ, ದೂರದ ಆಫ್ರಿಕಾದಲ್ಲಿ ಸತ್ಯ-ಅಹಿಂಸೆ ಮತ್ತು ಮಾನವತೆಯನ್ನು ಮೆರೆದ ಮೋಹನದಾಸ ಗಾಂಧೀ ಓರ್ವ ಯುವ ಬ್ಯಾರಿಸ್ಟರ್; ಸ್ವಾತಂತ್ರ್ಯ ಚಳುವಳಿಯಲ್ಲಿ ಗಲ್ಲಿಗೇರಿದ ಭಗತ್‌ಸಿಂಗ್, ಸಂಗೊಳ್ಳಿ ರಾಯಣ್ಣ ಯುವಕರೇ ಆಗಿದ್ದರು; ಇಂಗ್ಲೀಷರ ಗುಂಡಿಗೆ ಗುಂಡಿನ ಉತ್ತರಕೊಟ್ಟ ಧೀರ ವ್ಯಕ್ತಿ ಸುಭಾಷ್‌ಚಂದ್ರ ಬೋಸ್ ಯುವವ್ಯಕ್ತಿ; ದಲಿತರ ಧರ್ಮದ ವಿರುದ್ಧ ಬಂಡಾಯ ಸಾರಿದ ನೇತಾರ ಡಾ॥ ಅಂಬೇಡ್ಕರ್ ಯುವಕರಾಗಿದ್ದಾಗ. ಹೀಗೆ ಎಲ್ಲ ಬಗೆಯ ಸಾಮಾಜಿಕ ಪ್ರವರ್ತಕರಲ್ಲಿ ಯುವಕರದೇ ಮೇಲುಗೈ ಇರುವುದು ನಮಗೆ ಕಾಣುತ್ತದೆ. ಇಂದು ನಮ್ಮ ದೇಶದ ಗಡಿಯನ್ನು ಕಾಯುತ್ತಿರುವವರು ಯುವಕರೇ.

ಇಂಥ ಶ್ರೇಷ್ಠ ಮತ್ತು ರೋಮಾಂಚಕಾರಿ ಪರಂಪರೆಯುಳ್ಳ ಇಂದಿನ

ಯುವಕರ ಮೇಲೆಯೂ ಸಹ ದೊಡ್ಡ ಹೊಣೆಗಾರಿಕೆ ಇದೆ. ಯುವಕರು ದಾರಿ ತಪ್ಪಬಾರದು. ತಮ್ಮ ಹಿಂದೆ ಆಗಿ ಹೋದ, ಮಹತ್ಸಾಧನೆಗಳನ್ನು ಮಾಡಿದ ಯುವಕರ ಜೀವನವನ್ನು ಅವಲೋಕಿಸಬೇಕು. ಯಾವ ಸಮಾಜದ ಅಥವಾ ರಾಷ್ಟ್ರದ ಯುವಕರು ಭೋಗಿಗಳೂ, ಐಷಾರಾಮಿಗಳೂ, ವಿಷಯಲೋಲುಪರೂ, ವಿದ್ಯಾವಿಹೀನರೂ, ಸೋಮಾರಿಗಳೂ ಆಗಿರುತ್ತಾರೋ ಆ ಸಮಾಜ ಅಥವಾ ರಾಷ್ಟ್ರ ಮುಂದುವರಿಯಲು ಸಾಧ್ಯವಿಲ್ಲ; ಅದಕ್ಕೆ ಅವನತಿಯೇ ಗತಿ. ಆದ್ದರಿಂದ ಯುವಕರು ತಮ್ಮ ಶರೀರದಲ್ಲಿ, ಅಂತರಂಗದಲ್ಲಿ ಅಡಗಿರುವ ಸುಪ್ತಶಕ್ತಿಗಳನ್ನು ತಿಳಿದುಕೊಂಡು ಅವುಗಳ ಸಹಾಯದಿಂದ ತಮ್ಮ ಜೀವನವನ್ನು ನಿರ್ಮಿಸಿಕೊಳ್ಳಬೇಕು. ಮನೆಗೂ ಉಪಕಾರಿಯಾಗಿ, ರಾಷ್ಟ್ರಕ್ಕೂ ಉಪಕಾರಿಯಾಗುವ ಪ್ರಯತ್ನವನ್ನು ಪ್ರತಿಯೊಬ್ಬ ಯುವಕನೂ ಮಾಡಬೇಕು. ಏಕೆಂದರೆ ಯುವಕರ ಚಾರಿತ್ಯ ನಿರ್ಮಾಣ ಬೇರೆಯಲ್ಲ, ರಾಷ್ಟ್ರ ನಿರ್ಮಾಣ ಬೇರೆ ಅಲ್ಲ. ಆದ್ದರಿಂದ ಇಂದು ನಮ್ಮ ದೇಶವನ್ನು ಕಾಡುತ್ತಿರುವ ನೂರಾರು ಬಗೆಯ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಲು ಸತ್ ಚಾರಿತ್ರ್ಯವುಳ್ಳ ಯುವಕರು ಬೇಕಾಗಿದ್ದಾರೆ. ಅಂಥ ಯುವಕರಲ್ಲಿ ನೀವು ಏಕೆ ಒಬ್ಬರಾಗಬಾರದು? ★

ಒಂದು ಸ್ಮರಣೆ ೩೦ ನೇ ಪುಟದಿಂದ

ಶರ್ಮರು ನಿರ್ವಹಿಸಿದರು. ಅವುಗಳಲ್ಲಿ ಪ್ರಮುಖವಾದವು 'ಜಯಕರ್ನಾಟಕ', 'ಸರ್ವೋದಯ', 'ಕನ್ನಡ ಹರಿಜನ', 'ಭೂದಾನ' 'ವಾಹಿನಿ', 'ವಿಶ್ವಕರ್ನಾಟಕ', 'ಜೀವನ', 'ಕನ್ನಡ ನುಡಿ' ಶರ್ಮರ ಸಂಪಾದಕತ್ವದ ಪತ್ರಿಕೆಗಳ ಸಂಚಿಕೆಗಳನ್ನು ಈಗ ನೋಡಿದರೂ ಮೆಚ್ಚಲೇಬೇಕಾದ ಅಚ್ಚುಕಟ್ಟು ಲವಲವಿಕೆ ಅವುಗಳಲ್ಲಿ ಎದ್ದು ಕಾಣುತ್ತದೆ. ತಿ. ತಾ. ಶರ್ಮರೂ ಕೃಷ್ಣಶರ್ಮರೂ ಜೊತೆಗೂಡಿ ಮಾಡಿದ ನೆಹರೂರವರ 'Glimpses of World History' ಅನುವಾದ 'ಜಗತ್ ಕಥಾವಲ್ಲರಿ' ಈಗ ಓದಿದರೂ ಮನೋಹರವೆನಿಸುತ್ತದೆ.★

(ಉತ್ಥಾನ ಸಾಭಾರ)

ಬಜಾಜ್ ಪ್ರಶಸ್ತಿ

ಭಾರತದ ಹೊರಗೆ ಮಹಾತ್ಮಾ ಗಾಂಧೀಜಿಯವರ ಮೌಲ್ಯಗಳನ್ನು ಎತ್ತಿಹಿಡಿಯುವ ಭಾರತೀಯೇತರ ವ್ಯಕ್ತಿಗೆ ಪ್ರತಿವರ್ಷವೂ ಕೊಡಲಾಗುವ ಪ್ರತಿಷ್ಠಿತ ಬಜಾಜ್ ಪ್ರಶಸ್ತಿಯನ್ನು ದಕ್ಷಿಣ-ಆಫ್ರಿಕಾದ ಆರ್ಚಿಬಿಶಪ್ ದೇಸ್‌ಮಾಂಡ್ ಟುಟು ಅವರಿಗೆ ವರ್ಣದ್ವೇಷದ ವಿರುದ್ಧ ನಡೆಸಿದ ಹೋರಾಟಕ್ಕಾಗಿ ೨೦೦೧ ಜೂನ್ ೨೬ ರಂದು ಕೇಪ್‌ಟೌನಿನಲ್ಲಿ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ಎರಡು ಲಕ್ಷ ರೂಪಾಯಿ, ಒಂದು ಟ್ರೋಫಿ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿದೆ. ★

ಭಾರತ-ಪಾಕ್ ಮೈತ್ರಿ

೪ನೇ ಪುಟದಿಂದ

೧ ಕಾಶ್ಮೀರದ ಇಂದಿನ ಸ್ಥಿತಿಯನ್ನೇ ಒಪ್ಪುವುದು; ಅಂದರೆ ಪಾಕಿಸ್ಥಾನ ಆಕ್ರಮಿಸಿಕೊಂಡಿರುವ ಪ್ರದೇಶವನ್ನು ಆ ದೇಶಕ್ಕೂ, ಉಳಿದುದನ್ನು ಭಾರತಕ್ಕೂ ಸೇರಿಸುವುದು

ಅಥವಾ

೨ ಜಮ್ಮು ಮತ್ತು ಲಡಾಖನ್ನು ಭಾರತಕ್ಕೆ ಸೇರಿಸಿ ಇನ್ನು ಬಹುಸಂಖ್ಯಾತ ಇಸ್ಲಾಂಮಿಯರ್ ಪ್ರದೇಶವನ್ನು ಪಾಕಿಸ್ಥಾನಕ್ಕೆ ಒಪ್ಪಿಸುವುದು;

ಅಥವಾ

೩ ಜನಮತ ಸಂಗ್ರಹಿಸಿ ಅದರ ತೀರ್ಮಾನದಂತೆ ಬದ್ಧರಾಗುವುದು;

ಅಥವಾ

೪ ಕಾಶ್ಮೀರವನ್ನು ಒಂದು ಸ್ವತಂತ್ರ ದೇಶವನ್ನಾಗಿ ಒಪ್ಪುವುದು.

ಅಥವಾ

೫ ಶಿಮ್ಲಾ ಒಪ್ಪಂದ ಮತ್ತು ಲಾಹೋರ ಘೋಷಣೆಗಳಲ್ಲಿಯ ಅಂಶಗಳನ್ನು ಜಾರಿಗೆ ತರುವುದು. ಅಥವಾ

೬ ಮೂರನೇ ದೇಶದ ಮುಖ್ಯವಾಗಿ ಅಮೇರಿಕಾ ದೇಶದ, ಮಧ್ಯಸ್ಥಿಕೆಗೆ ಒಪ್ಪುವುದು ಮತ್ತು ಅದರ ತೀರ್ಮಾನಕ್ಕೆ ಬದ್ಧರಾಗುವುದು.

ಅಥವಾ

೭ ರಾಜಕೀಯ ಮುತ್ಸದ್ದಿತನವನ್ನು ಉಪಯೋಗಿಸಿ ಪಾಕಿಸ್ಥಾನಕ್ಕೆ ಸ್ವಯಂ ಆಡಳಿತದ ಅಧಿಕಾರವನ್ನು ಕೊಡುವುದರ ಮೂಲಕ ಭಾರತ ಮತ್ತು ಪಾಕಿಸ್ಥಾನವನ್ನು ಒಗ್ಗೂಡಿಸುವುದು ಅಥವಾ

೮ ಪಾಕ್ ಆಕ್ರಮಿತ ಪ್ರದೇಶಕ್ಕೆ ಬದಲಾಗಿ ಹಣ ಮತ್ತು ಇತರ ಪರಿಹಾರಗಳನ್ನು ಕೊಡುವುದರ ಮೂಲಕ ಆ ಪ್ರದೇಶವನ್ನು ಭಾರತಕ್ಕೆ ಖರೀದಿಸುವುದು.

ಇಂಥ ಯಾವುದೇ ಕೊಟ್ಟು-ಕೊಳ್ಳುವ ನೀತಿಯನ್ನು ಅನುಸರಿಸಲು ಸಾಧ್ಯವಿಲ್ಲದಂಥ ಬಹಳ ಪ್ರಚೋದನಕಾರಿಯಾಗಿರುವಂಥ ಬಿಗಿ ವಾತಾವರಣ ಎರಡೂ ದೇಶಗಳಲ್ಲಿದೆ. ಆದ್ದರಿಂದ ವಾಜಪೇಯಿ ಮತ್ತು ಮುಷರಫ್ ಇಬ್ಬರೂ ಬೆಂಕಿಯೊಂದಿಗಿನ ಸರಸದಂಥ ಪರಿಸ್ಥಿತಿಯಲ್ಲಿದ್ದಾರೆ. ಇವರ ಮಾತುಕತೆಗಳು ಯಾವುದೇ ಸೂಕ್ತ ಒಪ್ಪಂದಕ್ಕೆ ದಾರಿಮಾಡಕೊಡದಿದ್ದರೆ ಭೀಕರ ಅನಾಹುತವೇ ಕಾದಿದೆ. ಎರಡೂ ದೇಶಗಳು ಭಯಾನಕ ಶಸ್ತ್ರಾಸ್ತ್ರಗಳನ್ನು ಹೊಂದಿವೆ. ಮುಂದಿನ ಹೋರಾಟದಲ್ಲಿ ಅವುಗಳ ಉಪಯೋಗ ಆಗದೆ ಇರಲು ಸಾಧ್ಯವಿಲ್ಲ.

ಆದ್ದರಿಂದ ವಾಜಪೇಯಿ – ಮುಷರಫ್ ಮಾತುಕತೆ ಸೌಹಾರ್ದ ಪೂರ್ಣವಾಗಿ ನಡೆದು ಎರಡೂ ದೇಶಗಳ ಜನತೆಗೆ ಸಮಾಧಾನ ತರುವಂಥ ಒಪ್ಪಂದವಾಗಲಿ ಮತ್ತು ಮೈತ್ರಿಯ ಅರುಣೋದಯವಾಗಲಿ ಎಂದು ಸಮಸ್ತರೂ ಪ್ರಾರ್ಥಿಸೋಣ. ★

KA-SKMND-470/-2000.

ತೆರೆದ-ಅಂಚೆ

Regd No. KAR/KAN/2000/3820

Vol 1 Issue 12.

Janapada Vichara – Kannada Monthly Digest Edited and Printed by Surendra Koulagi at Janapada Seva Trust Printing Press. Melkote on behalf of Janapada Seva Trust, (Regd) Melkote. Dist – Mandya 571 431.

Phone : 08236/58754